
Nutana Yoga (New Yoga) Bhruktha Rahita Taraka Rajayoga

Kannada Edition

NYBRTRK



ವಿಷಯ ಸೂಚಿಕೆ

ಮಾಸ್ಟರ್ ಸಿ.ವಿ.ವಿ. ನಮಸ್ಕಾರಗಳು
ಗುರುದೇವ ವಿ.ಪಿ.ಎಸ್. ನಮಸ್ಕಾರಗಳು

ನೂತನ ಯೋಗ(ನ್ಯೂ ಯೋಗ)
ಭೃಕ್ತ ರಹಿತ ತಾರಕ ರಾಜಯೋಗ
ನೀವು ಮೃತ್ಯುವನ್ನು ಜಯಿಸ ಬೇಕೆಂದು ಕೊಳ್ಳುತ್ತಿರುವಿರಾ?
ಹೌದು ಹೇಗೆ?

1. ಈಯೋಗವು ಏಕೆ ಪ್ರಾರಂಭಿಸಲ್ಪಟ್ಟಿದೆ?

ಒಂದು ಕುಂಡಲಿನಿ ಅಥವ ಅಣುವು/ಮಾಲಿಕ್ಯೂಲ್ ಮಾನವ ಶರೀರದ ನಿರ್ಮಾಣಕ್ಕೆ ಕಾರಣವಾಗಿದೆ. ಈಅಣುವು ಪುರೀಷ ನಾಳಮತ್ತು ಮೂತ್ರ ಸ್ಥಾನದ ಮಧ್ಯೆ ಇರುತ್ತದೆ. ಈಅಣುವು ಅನೇಕ ಜನ್ಮಗಳಿಂದ ಅನೇಕ ವಿಧವಾದ ಪಾಪಗಳನ್ನು ಹೊತ್ತುಕೊಂಡು ಬಂದು ಈಜನ್ಮದಲ್ಲಿ ವ್ಯಾಧಿಗಳ ರೂಪದಲ್ಲಿಯೂ, ಕಷ್ಟಗಳ ರೂಪದಲ್ಲಿಯೂ ಬಾಧಿಸುತ್ತಿದೆ. ಈ ಕರ್ಮಸಂಬಂಧ ವ್ಯಾಧಿಗಳನ್ನು ಡಾಕ್ಟರುಗಳು ತಿಳಿದುಕೊಳ್ಳ ಲಾಗದೇ ಹೋಗುತ್ತಿರುವರು. ಚಿಕಿತ್ಸೆ ಮಾಡಲಾಗದೇ ಹೋಗುತಿದ್ದಾರೆ. ರಾಶಿ ಭೂತವಾಗಿ ಹೋದ ಜನ್ಮಜನ್ಮಗಳ ಕರ್ಮವನ್ನು ತೊಲಗಿಸಲು, ಕರ್ಮವ್ಯಾಧಿಗಳನ್ನು, ಕಷ್ಟಗಳನ್ನು ತೊಲಗಿಸಲು ಮಾನವನನ್ನು ಸಾವಿನಿಂದ ತಪ್ಪಿಸಿವುದು, ಆನಂತರ 'ಎಟರ್ನಿಟಿ'ಯನ್ನು (Eternity) ಸಂಪಾದಿಸುವ ಹಾಗೆಮಾಡಲು ಈ ಯೋಗದ ಮುಖ್ಯ ಉದ್ದೇಶವು. (ಉಲ್ಲೇಖ:ಮಹಾತ್ಮ ಲೆಟರ್ಸ್ ಪುಟ.100-106)

ಪ್ರಪಂಚದಲ್ಲಿ ಅಟಾಮಿಕ್ ಫಿಸಿಕ್ಸ್ ಎಂಬುವುದು 1941ರಲ್ಲಿ , ನ್ಯೂಕ್ಲಿಯರ್ ಫಿಸಿಕ್ಸ್ 1961ರಲ್ಲಿ, ಕ್ವಾಂಟಮ್ ಫಿಸಿಕ್ಸ್ 1990ರಲ್ಲಿ(ಇವೆಲ್ಲಾ ಅಂದಾಜು) ಬೆಳಕಿಗೆ ಬಂದಿದೆ.

ಅಣುವನ್ನು ಕುರಿತು ಅಮೆರಿಕ, ಜಪಾನ್, ಜರ್ಮನ್, ಇಟಲಿ ದೇಶದಲ್ಲಿ ಪರಿಶೋಧನೆ ನಡೆದಿದೆ. ಅಮರಿಕಾಕ್ಕೆ ಸೇರಿದ ರೇಮಂಡ್ ಡಾವಿಸ್ ಜೂನಿಯರ್, ಜಪಾನಿಗೆ ಸೇರಿದ ಮಸತೋಸಿ ಕೋಷಿಬ, ಕಾರ್ಲಾ ಸಾಗೆನ್, ಐನ್ ಸ್ಟೀನ್(1921), ನೀಲ್ಸ್ ಬೋರ್ನ್(1922), ಮಾಕ್ಸ್ ಫ್ಲಾಂಕ್(1918), ರಿಕಾರ್ಡೊ ಜೀಕೋನಿ, ಆರ್ಥರ್ ಕ್ಲಾರ್ಕೆ, ಎರ್ವಿನ್ ಷ್ರಡಿಂಗರ್, ಮಾಕ್ಸ್ ಬೋರ್ನ್, ಹೈಜನ್ ಬರ್ಗ, ಪಾಲ್ ಡಿರೆಕ್, ರಿಛರ್ಡ ಫೈನ್‌ಮೆನ್ ಕೂಡಾ ಇದ್ದಾರೆ. ಇವರಲ್ಲಿ ತುಂಬಾ ಜನ ನೋಬೆಲ್ ಪ್ರಶಸ್ಥಿ ಹೊಂದಿದವರು. ಅಮೆರಿಕ ಪ್ರೆಸಿಡೆಂಟ್‌ಗೆ ಸಾಂಕೇತಿಕ ಸಲಹೆಗಾರರು ಡಾ॥ಕೃಷ್ಣ. ಆರ್.ದ್ರೋಣಂರಾಜು ಅಣುಲೋಪವನ್ನು ತಿದ್ದು ಪಡಸಿದರೆ ಮೃತ್ಯುವನ್ನು ಜಯಿಸಿ ಮಾನವನು ಶಾಶ್ವತವಾಗಿ ಜೀವಿಸ ಬಲ್ಲನು ಎಂದಿದ್ದಾರೆ. ಇದು ಹೈದರಾಬಾದ್ ನಲ್ಲಿ ಈನಾಡು(ತೆಲುಗು ದಿನ ಪತ್ರಿಕೆ) ಪತ್ರಿಕೆ ಯಲ್ಲಿ ಕೊಟ್ಟ ಸಂದರ್ಶನದಲ್ಲಿ 16.1.2001ರಲ್ಲಿ ಹೇಳಿದ್ದಾರೆ. ಇದು ಮಾಸ್ಟರ್ ಅವರ ಸಾಹಿತ್ಯವು ನೋಡಿದ ಮೇಲೆ

ಹೇಳಿರುವರೆಂದು ನನ್ನ ನಂಬಿಕೆ. ಅಮೇರಿಕಾ ಪ್ರೆಸಿಡೆಂಟ್ ಬಿಲ್‌ಕ್ಲಿಂಟನ್ 'ಇದು ನಮಗೇ ಅಲ್ಲದೇ, ಇದೇ ಪ್ರಪಂಚಕ್ಕೆ ಉಪಯೋಗ ವಾಗುತ್ತದೆ ಎಂದಿದ್ದಾರೆ. ಹೈದರಾಬಾದ್‌ನಲ್ಲಿ ಈಮಧ್ಯೆ "ಜನೋಮ್ ಪ್ರಾಜೆಕ್ಟ್"ಪ್ರಾರಂಭೋತ್ಸವದಲ್ಲಿ ಮುಖ್ಯಮಂತ್ರಿ ಚಂದ್ರಬಾಬು ನಾಯುಡು ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ಮಾಸ್ಟರ್' ಅವರು 1910ರಲ್ಲಿ "ಒಂದು ಅಣುವು ಮಾನವ ಜನ್ಮಕ್ಕೆ ಕಾರಣವಾಗಿದೆ, ಅದನ್ನು ಸರಿಪಡಿಸಿದರೆ ಮಾನವನು ಮರಣವನ್ನು ಜಯಿಸಿ, ಈ ರಕ್ತ ಮಾಂಸಗಳಿಂದ ಕೂಡಿದ ಶರೀರ ದೊಂದಿಗೆ ಶಾಶ್ವತವಾಗಿ ಬದುಕಬಹುದು" ಎಂದಿದ್ದಾರೆ. 1910ರಲ್ಲಿ ಮಾಸ್ಟರ್ ಸಿ.ವಿ.ವಿ. ಅವರು ಕಂಡುಕೊಂಡು ಬರೆದ ವಿಷಯಗಳನ್ನು 60 ವರ್ಷಗಳನಂತರ ವಿಜ್ಞಾನಿಗಳೆಲ್ಲ "ಅಣುವನ್ನು ಸರಿಪಡಿಸಿದರೆ ಮಾನವನು ಮರಣದಿಂದ ತಪ್ಪಿಸಿಕೊಳ್ಳ ಬಹುದು" ಎಂದಿದ್ದಾರೆ. ಇದಕ್ಕೆ ಮುಂಚೆ ಈ ತರಹ ಹೇಳಿದವರೇ ಇಲ್ಲ ಎಂದು ಅಂದುಕೊಂಡಿದ್ದೇನೆ.

ಇದಕ್ಕೆ ಮುಂಚೆ ಅಂದರೆ 1930ರಲ್ಲಿ ಮಾನವನ ಸರಾಸರಿ ಆಯುಷ್ಯ ಸರ್ಕಾರದ ಲೆಕ್ಕಾಚಾರದ ಪ್ರಕಾರ 16-30ವರ್ಷಗಳು ಇರುತ್ತಿತ್ತು. ಮಾಸ್ಟರ್ ಅವರು ತಮ್ಮ "ಮಂತ್ರಗಳನ್ನು ಅಮೃತದಂತೆ ವಿಶ್ವದಲ್ಲಿ ವ್ಯಾಪ್ತಿಪಡಿಸಿದ್ದೇನೆ. ಅದು ಕೆಲಸಮಾಡುತ್ತಿದೆ" ಎಂದಿದ್ದಾರೆ.

ಆ ಅಮೃತ ವರ್ಷವು ಮಾನವನಿಗೆ ತಿಳಿಯದೆಯೇ ಅವನ ಮೇಲೆ ಬಿದ್ದ ಕಾರಣದಿಂದ ಇಂದು ಮಾನವನ ಅಯುಷ್ಯ 60-80ರವರಿಗೆ ಬೆಳದಿದೆ. ಇದನ್ನು ನೋಡಿದರೆ 1910ರಲ್ಲೇ 'ಮಾಸ್ಟರ್ ಸಿ.ವಿ.ವಿ.' ಅವರು ಎಷ್ಟು ಅಭಿವೃದ್ಧಿಯನ್ನು ಸೃಷ್ಟಿಕರ್ತ ನಿಂದ ಸಂಪಾದಿಸಿದ್ದಾರೋ ತಿಳಿಯುತ್ತದಲ್ಲವೆ..!

ನಿಜವಾಗಿ ಮಾಸ್ಟರ್ ಅವರಿಗೆ ನೋಬೆಲ್ ಪ್ರಶಸ್ತಿ ಗಿಂತಲೂ ಶ್ರೇಷ್ಟವಾದದ್ದನ್ನು ಕೊಡಬೇಕು. ಈ ವಿಷಯ ಪ್ರಪಂಚಕ್ಕೆ ತಿಳಿಯದೇ 'ಮಾಸ್ಟರ್' ಅವರಿಗೆ ಪ್ರಶಸ್ಥಿ ಕೊಡಲಿಲ್ಲ.

ಮಾನವರೆಲ್ಲರೂ ಮೃತ್ಯುವನ್ನು ಗೆಲ್ಲಬೇಕೆಂದು ಮುಂಚೆಯೇ ತಿಳಿಸಿದ ಸಿ.ವಿ.ವಿ. ಅವರಿಗೆ ತಕ್ಕ ಮರ್ಯಾದೆಯನ್ನು ಕೊಡದೇ ಇದ್ದುದ್ದು ತಪ್ಪಲ್ಲವೇ?

ಮಾಸ್ಟರ್ ಅವರ ಕೇವಲ ಪ್ರೇಮ ಕಾರಣದಿಂದಲೇ ಅಭಿವೃದ್ಧಿಯ ಸ್ಥಾನವನ್ನು ಹೊಂದುವಂತೆ ನೀವು ಎಟರ್ನಿಟಿ ಸಂಪಾದಿಸಲು ಅರ್ಹರಾಗುವಿರಿ. ಯಾವಾಗೆಂದರೆ ಹತ್ತು ವರ್ಷಗಳು ಬಿಡದಂತೆ ಕ್ರಮ ತಪ್ಪದಂತೆ ಅತ್ಯಂತ ಭಕ್ತಿಯಿಂದ, ಸ್ಥಿರವಾಗಿ ಶ್ರದ್ಧಾ ಪೂರ್ವಕವಾದ ಸಾಧನೆ ಮಾಡುವುದರಿಂದ.

ಪ್ರಾಚೀನ ಯೋಗಗಳ ಮೂಲಕ ಹೊಂದ ಲಾಗದ, ಅಪೂರ್ವವಾದ, ಉನ್ನತವಾದ ಶಕ್ತಿಗಳನ್ನು,ಮತ್ತು ಸಿದ್ಧಿಗಳನ್ನು ಮತ್ತು ಅದಕ್ಕಿಂತ ಅಧಿಕವಾಗಿರುವುದನ್ನು ಕನಸಿನಲ್ಲೂ, ಊಹಿಸದಂತಹ ಎಂದರೆ ನಶಿಸಿಹೋಗದಂತಹ ಪೂರ್ತಿ ಪ್ರಜ್ಞೆಯಿಂದ ರಕ್ತ-ಮಾಂಸಾದಿ ಗಳಿಂದ ಕೂಡಿದ ಈಭೌತಿಕ ಶರೀರ ವ್ಯವಸ್ಥೆ ಇರುವುದನ್ನು ಈ ಸಾಧನೆಯ ಮೂಲಕ ಹೊಂದಬಹುದು.

ಎಂದರೆ 'ಎಟರ್ನಿಟಿ' ಯನ್ನು ಕೊಡುವುದು.(ಅಡ್ವೈಸ್ ಮಾಸ್ಟರ್ ಸಿ.ವಿ.ವಿ. 17-12-1917)

'ಮಾಸ್ಟರ್ ಸಿ.ವಿ.ವಿ.' ಎಂದು ಪ್ರಾರ್ಥನೆ ಮಾಡುವವರು ಆಹಾರ ಕಮ್ಮಿ ತೆಗೆದುಕೊಂಡರು ಆತನು ಬಲಹೀನನಾಗುವುದಿಲ್ಲ. ಅವನ ಶರೀರ ಅವಯವಗಳೆಲ್ಲಾ ಸಕ್ರಮವಾಗಿ ಕೆಲಸ ಮಾಡುತ್ತದೆ. ಅದು ಕ್ಷೀಣಿಸುವ ಸ್ಥಿತಿಯಲ್ಲಿರುವುದಿಲ್ಲ. 30 ವರ್ಷ ವಯಸ್ಸಿನಲ್ಲಿರುವ ಹಾಗೆ ಇರುವನು, ನಿಗ್ರಹವಾಗಿರುತ್ತಾನೆ. ಅವನ ಆಲೋಚನೆಗಳು ಸರಿಯಾಗಿ ಕೆಲಸ ಮಾಡುತ್ತದೆ. ಅವನು ಇದು ಆಗಬೇಕು ಎಂದರೆ ಆಗುತ್ತದೆ. ಅವನು 'ಹೌದು ಎಂದರೆ ಹೌದು', 'ಅಲ್ಲ ಎಂದರೆ ಅಲ್ಲ' ಎಂಬುದರ ಉತ್ತರ ಮಾಸ್ಟರ್ ಅವರಿಂದ ಅವನ ಮೂಲಕ ಬರುತ್ತದೆ.(ಉ.ಡೈ.ಪು.452)

ಈ ಯೋಗವು ಈ ರಕ್ತ-ಮಾಂಸಾದಿ ಗಳಿಂದ ಕೂಡಿದ ಈಮಾನವ ಶರೀರವು ನಶಿಸಿ ಹೋಗದಂತೆ ಇರಲು, ನವಗ್ರಹಗಳಿಗೆ ಒಳಗಾಗದಂತೆ ಜೀವಿಸಲು, ಈ ಸ್ಥೂಲ ಶರೀರವು ಪ್ರಜ್ಞೆ ಯನ್ನು ಕಳೆದುಕೊಳ್ಳದ ಹಾಗೆ ಜಾಗೃತವಾಗಿರು ವಾಗಲೇ ಈ ಮಾನವ ಶರೀರದಲ್ಲಿ ದಿನವೂ ನಡೆಯುವ ಮಾರ್ಪುಗಳನ್ನು ಕ್ರಮಕ್ರಮವಾಗಿ ತಿಳಿದುಕೊಳ್ಳಲು, ಎಲ್ಲಾವಿಧವಾದ ಆತ್ಮಜ್ಞಾನವನ್ನು ಸಂಪಾದಿಸಲು ಈ ಯೋಗವು ಆರಂಭಿಸಲ್ಪಟ್ಟಿದೆ.

ಈ ಸೃಷ್ಟಿರಹಸ್ಯಗಳನ್ನು ಎಂದರೆ ಪ್ರಪಂಚ ಏಕೆ ಹುಟ್ಟಿದೆ? ಹೇಗೆ ಹುಟ್ಟಿದೆ? ಎಂಬ ವಿಷಯಗಳು ಸುಲಭವಾದ ರೀತಿಯಲ್ಲಿ, ವಿದ್ಯಾವಂತರಿಗೆ, ಅವಿದ್ಯಾವಂತರಿಗೆ, ಧನಿಕರಿಗೆ, ಬಡವರಿಗೆ, ಸಂಸಾರ ಜೀವನದಲ್ಲೇ ಎಲ್ಲಾ ವಿಷಯಗಳು ತಿಳಿಸಿ, ರೋಗಗಳು, ಮುಪ್ಪು, ಸಾವಿಲ್ಲದೆ ಸುಖವಾಗಿ ಜೀವಿಸಲು ನಮಗೇ ಅಲ್ಲ, ನಮ್ಮಜೊತೆ ಸನ್ನಿಹಿತ ಸಂಬಂಧ ವಿದ್ದವರೂ ಸಹಾ ಈ ಫಲವನ್ನು ಅನುಭವಿಸಲು ಈಯೋಗವು ಪ್ರಾರಂಭಿಸಲ್ಪಟ್ಟಿದೆ.

'ಯಾವುದೇ ವಿಧವಾದ ಸಡಲಿಕೆಗಳು ಇಲ್ಲದೆ ಪ್ರಪಂಚದಲ್ಲಿಯ ಮಾನವರೆಲ್ಲರೂ ತಮ್ಮಲ್ಲಿ ಹುದುಗಿರುವ ಆ ಭಗವಂತನನ್ನು ಕುಂಡಲಿನಿಯ ದಿವ್ಯಶಕ್ತಿಯ ಮೂಲಕ ಪ್ರಜ್ಞೆ ಇರುವಾಗಲೇ ದರ್ಶಿಸಿ, ನಿಮ್ಮಲ್ಲಿ ಉಂಟಾಗುವ ಸಂದೇಹಗಳನ್ನು ಅಂತರಾತ್ಮ ಶಕ್ತಿಯ ಮೂಲಕ ತಿಳಿದುಕೊಳ್ಳಲು ಈ ಯೋಗವು ಪ್ರಾರಂಭಿಸಲ್ಪಟ್ಟಿದೆ'.(ಇಂಡಿಪೆಂಡೆನ್ಸ್ ಡಿಕ್ಲರೇಷನ್ ತಾ.1.7.1910).
ಈಯೋಗದಲ್ಲಿ 6ಕಾಂಟ್ರಾಕ್ಟ್‌ಗಳು ಕೆಲಸ ಮಾಡುತ್ತಿದೆ (ಒಪ್ಪಂದಗಳು)

1. ಅನಂತವಾದ ಪ್ರಾಣಶಕ್ತಿಯನ್ನು ಕೊಡುವುದು.
2. ಸ್ಥೂಲಪ್ರಜ್ಞೆಯಲ್ಲಿ ಜೀವಿಸಿರುವಾಗಲೇ ಅನಂತವಾದ ಪ್ರಾಣಶಕ್ತಿಯನ್ನು ಕೊಡುವುದು.
3. ರಕ್ತ-ಮಾಂಸಾದಿಗಳಿಂದ ಕೂಡಿದ ಈ ಶರೀರವು ನಶಿಸಿ ಹೋಗದಂತೆ ಇರುವುದು ಎಂದರೆ(ಸಾವಿಲ್ಲದೆ ಇರುವುದು).
4. ರಕ್ತ-ಮಾಂಸಾದಿಗಳಿಂದ ಕೂಡಿದ ಈ ಶರೀರವು ಮಾರ್ಪು ಹೊಂದದೇ ಇರುವುದು.
5. ಸತ್ತವರನ್ನು ಸಶರೀರವಾಗಿ ಕರೆಸಲ್ಪಡುವುದು ಎಂದರೆ ರಕ್ತ,ಮಾಂಸಾದಿಗಳಿಂದ ಕೂಡಿದ ಈ ಶರೀರದಲ್ಲೇ.

6. ಭೂತ-ವರ್ತಮಾನ-ಭವಿಷ್ಯತ್ ಕಾಲದಲ್ಲಿ ನಡೆಯುವ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವುದು ಎಂದರೆ ಮಾಯೆಯನ್ನು ಹೊರದೋಡಿಸುವುದು.

(ಮಾಯಾ ಎಂದರೆ ಅಭಿವೃದ್ಧಿಯನ್ನು ಅಡ್ಡಿಮಾಡುವ ಶಕ್ತಿ)(ಉ.ಡೈ. ಪುಟ. 417, ತಾ. 30-11-1920).

2. ನ್ಯೂಯೋಗ ಎಂದರೇನು?

ಭಕ್ತಿ ಶ್ರದ್ಧೆ ವಿಶ್ವಾಸವು ಅತಿಜಾಗ್ರತೆ ಯಿಂದ, ರೂಲ್ಸ್-ರೆಗ್ಯುಲೇಶನ್ಸ್ ಪಾಲಿಸುತ್ತ ಏಕಾಗ್ರತೆಯಿಂದ ಅಂತರಾತ್ಮ ಪರಿಶೀಲನೆ ಮಾಡುತ್ತ ಪ್ರಾರ್ಥನೆ ಮಾಡುವ ವರಿಗೆ 'ಶಾಶ್ವತತ್ವ'ವನ್ನು ಈಯೋಗವು ಪ್ರಸಾದಿಸುತ್ತದೆ.

'ಮಾಸ್ಟರ್ ಸಿ.ವಿ.ವಿ. ಅವರು' 01-07-1917ರಂದು ಯೋಗವೆಂದರೆ ಏನು? ಎಂಬುದಕ್ಕೆ ವಿವರಣೆಯನ್ನು ಕೊಟ್ಟದ್ದಾರೆ. ಯೋಗವೆಂದರೆ ಒಂದು ವಿಧವಾದ ಇನ್ನರ್ 'ಡೆವಲಪ್‌ಮೆಂಟ್'(ಒಂದು ವಿಧವಾದ ಅಂತರಾತ್ಮ ಅಭಿವೃದ್ಧಿ) ಅದೆ ಮೆಡಿಟೇಷನ್ ಎಂದರೆ ಧ್ಯಾನ, ಧ್ಯಾನದಲ್ಲಿ ಚುರುಕಾದ ಅಭಿವೃದ್ಧಿಯು ಲಭಿಸುತ್ತದೆ.

ಸೃಷ್ಟಿಕರ್ತನು ಈಯೋಗಕ್ಕೆ ''ಭೃಕ್ತ ರಹಿತ ತಾರಕ ರಾಜಯೋಗ'' ಎಂದು ಹೆಸರಿಟ್ಟಿದ್ದಾರೆ. 'ಭೃಕ್ತ' ಎಂದರೆ ಹುದುಗಿರುವ ಕಣ್ಣಿಗೆ ಕಾಣದಂತೆ ಇರುವುದು, ಅದಾವುದೆಂದರೆ ಪೂರ್ವಜನ್ಮ ಕರ್ಮ, 'ರಹಿತ' ಎಂದರೆ ತೊಲಗಿಸುವುದು.

'ತಾರಕ' ಎಂದರೆ ಶ್ರೇಷ್ಟವಾದ, 'ರಾಜಯೋಗ' ಎಂದರೆ ಸನ್ಯಾಸಿಯಾಗದೆ ಗೃಹಸ್ಥಾಶ್ರಮದಲ್ಲೇ ಇದ್ದು ಈಯೋಗವನ್ನು ಅಭ್ಯಿಸಿಸುವುದು.

ಪ್ರಾಚೀನ ಕಾಲದಲ್ಲಿ 64 ಯೋಗಗಳು ಇದ್ದವು. ಇದು 65ನೇ ಯೋಗ ವೆಂದಿದ್ದಾರೆ. 65ನೇ ಯೋಗ ಆದ್ದರಿಂದ ಈಯೋಗಕ್ಕೆ 'ನ್ಯೂಯೋಗ'(New Yoga) ಎಂದು ಹೆಸರಿಟ್ಟಿದ್ದಾರೆ. ಈ ಯೋಗಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು 'ಸೈಂಟಿಫಿಕ್'ಆಗಿ ಎಂದರೆ ಶಾಸ್ತ್ರೋಕ್ತವಾಗಿ ತಿಳಿಯಪಡಿಸುವುದರಿಂದ ಈ ಯೋಗಕ್ಕೆ 'ಸೈಂಟಿಫಿಕ್‌ಯೋಗ' ಎಂದು ಕೂಡ ಹೆಸರಿಟ್ಟಿದ್ದಾರೆ.(ಉ. ಇಂಡಿಪೆಂಡೆನ್ಸ್ ಡಿಕ್ಲರೇಷನ್ ತಾ.1-7-1910) (ಇನ್ನು ಮಹಾತ್ಮ Letters ವಾಲ್ಯೂಂ ಗಳು 1-3) ಇನ್ನು ಈ ಯೋಗವು 'ಕುಂಡಲಿನಿ ಯೋಗ' ಎಂದು, 'ಪ್ರಾಕ್ಟಿಕಲ್ ಯೋಗ' ಎಂದು ಕೂಡಾ ಬಳಕೆಯಲ್ಲಿದೆ. ಪತಂಜಲಿ ಈ ರಾಜಯೋಗವನ್ನು 'ಅಷ್ಟಾಂಗಯೋಗ' ಎಂದಿದ್ದಾರೆ.

ಜನ್ಮಿಸುವ ಸಮಯದಲ್ಲಿ 'ಪ್ರಾಣಶಕ್ತಿ' ಎಂದರೆ 'ಸ್ಥಿರತ್ವ- ಸ್ಟೆಬಿಲಿಟಿ'(Stability) ವಾಯು ರೂಪದಲ್ಲಿ ಶರೀರದೊಳಗೆ ಪ್ರವೇಶಿಸುವುದು. ಭೌತಿಕ ಶರೀರದಲ್ಲಿ ಈ ವಾಯುವು ಇರುವವರೆಗೆ ಪ್ರಾಣ ಇರುತ್ತದೆ. ಈ ಪ್ರಾಣವಾಯುವು ಭೌತಿಕ ಶರೀರದಿಂದ ಹೊರಕ್ಕೆ ಹೋದರೆ ಮೃತ್ಯುವು ಸಂಭವಿಸುತ್ತದೆ. ಪ್ರಾಣವಾಯುವು ಶರೀರದಲ್ಲಿ ನರಗಳ ಮೂಲಕ ಸಂಚರಿಸುತ್ತಿರುತ್ತದೆ. ಈಗ

ಮಾನವರಿಗೆ ಇರುವ ನರಗಳು 'ವಿಚ್ಛಿನ್ನ'ವಾಗು ವಂತಹವು. ಅದು ವಿಚ್ಛಿನ್ನವಾಗು ವುದರಿಂದ ಸಾವು ಸಂಭವಿಸುತ್ತದೆ.

ಆದರೆ ಈ ಪ್ರಾರ್ಥನೆ ಮಾಡುವವರಿಗೆ ಈಗಿರುವ ನರಗಳ ಒಳಗೆ ಟ್ಯೂಬ್ ಹಾಗೆ(ಕೊಳವೆ) ತಯಾರಾಗುವುದು. ಈ ಟ್ಯೂಬ್ ವಿಚ್ಛಿನ್ನವಾಗದೆ ಇರುವುದು. ಈ ಟ್ಯೂಬ್ ತಯಾರಾದ ಮೇಲೆ, ಟ್ಯೂಬ್ ವಿಚ್ಛಿನ್ನವಾಗದೇ ಹೋಗುವುದರಿಂದ ಪ್ರಾಣವಾಯುವು ಹೊರಹೋಗದಂತೆ ಶರೀರದಲ್ಲಿ ಸಂಚರಿಸುತ್ತಾ ಇರುತ್ತದೆ. ಆಗ ಈ ಶರೀರವು ಯಾವ ವಿಧವಾದ ಬದಲಾವಣೆ ಹೊಂದದೆ(ಪರಿವರ್ತನೆ) ಶಾಶ್ವತವಾಗಿ ಎಂದರೆ 'ಎಟರ್ನಲ್' ಆಗಿ ಇರುತ್ತದೆ.

3. ನ್ಯೂಯೋಗವನ್ನು ಯಾರು ಪ್ರಾರಂಭಸಿದ್ದಾರೆ?

'ಕುಂಭಕೋಣಂ'ನಲ್ಲಿ 'ಶ್ರೀ ಕಂಚುಪಾಟಿ ವೆಂಕಟರಾವು ವೆಂಕಾಸಾಮಿರಾವು' ಅವರು ಈಯೋಗವನ್ನು ಪ್ರಾರಂಭಿಸಿದ್ದಾರೆ. ಇವರ ಪೂರ್ವಿಕರು ಕೃಷ್ಣಾಜಿಲ್ಲೆ ಯಿಂದ ತಂಜಾವೂರು ಸಂಸ್ಥಾನಕ್ಕೆ ಬಂದು ಸೇರಿದ್ದಾರೆ. ಕುಂಭಕೋಣಂ ನಲ್ಲಿ, ಶ್ರೀರಂಗಂ ನಲ್ಲಿಯೂ ವಾಸಿಸಿದ್ದಾರೆ. 04-08-1868 ಮಂಗಳವಾರವು ಬೆಳಿಗ್ಗೆ ಘಂಟೆ10-20ನಿಮಿಷಕ್ಕೆ ಧನಿಷ್ಟನಕ್ಷತ್ರ ಎರಡನೇ ಪಾದ ಕನ್ಯಾಲಗ್ನದಲ್ಲಿ ಸಿ.ವಿ.ವಿ. ಅವರು ಜನ್ಮಿಸಿದ್ದಾರೆ.

15000 ವರ್ಷಗಳಿಂದ ಸಿ.ವಿ.ವಿ. ಅವರ ಜನ್ಮಕ್ಕೆ ಕಾರಣವಾದ ಅಣುವು ಮೃತ್ಯುವನ್ನು ಜಯಿಸ ಬೇಕೆಂದು ಪ್ರಯತ್ನಿಸುತ್ತಾ ಬಂದಿದೆ. ಇದನ್ನು ನೋಡಿದ ಸೃಷ್ಟಿಕರ್ತ ಕಡೆಗೆ ಈ ಜನ್ಮದಲ್ಲಿ ಹೇಗೆ ಮಾಡಿದರೆ ಮೃತ್ಯುವನ್ನು ಜಯಿಸಬಹುದೋ ತಿಳಿಸುವುದಕ್ಕೆ ಸಿ.ವಿ.ವಿ. ಅವರ ಹತ್ತಿರ ಎಂ.ಟಿ.ಎ.(M.T.A.) ಎಂಬ ಮಹಾತ್ಮನನ್ನು ಕಳಿಸಿದೆ. ಆನಂತರ ಕೆಲವು ದಿನಗಳಿಗೇ ವೆಂಕಾಸಾಮಿರಾವು ಅವರನ್ನು ಮಾಸ್ಟರ್ ಸಿ.ವಿ.ವಿ. ಅವರೆಂದು ಕರೆಯಲಾರಂಭಸಿದ್ದಾರೆ.

ಇವರು 1910ರಲ್ಲೇ ಪ್ರಪಂಚದಲ್ಲಿ 4448 ವ್ಯಾಧಿಗಳಿವೆಯೆಂದು ಕಂಡು ಕೊಂಡಿದ್ದಾರೆ. ಈ ದಿನದವರೆಗೆ ಮೆಡಿಕಲ್ ಪ್ರಪಂಚದಲ್ಲಿ ಎಷ್ಟು ರೋಗಗಳಿವೆ ಎಂದು ತಿಳಿದುಕೊಳ್ಳಲಿಲ್ಲ. 'ಮಾಸ್ಟರ್ ಸಿ.ವಿ.ವಿ. ಅವರು' 13-8-1915ರಂದು ಕ್ಯಾನ್ಸರನ್ನು (Cancer) ಈಯೋಗದಮೂಲಕ ಗುಣಪಡಿಸಿದ್ದಾರೆ. ಕಾನ್ಸ್‌ರ್ ಎಂಬ ಪದ ಅಂದು ಆಂಗ್ಲವೈದ್ಯ ಪ್ರಪಂಚಕ್ಕೆ ತಿಳಿಯದು.

8-12-1910ರಲ್ಲಿ ಮಾನವ ಶರೀರವನ್ನು ಸ್ಕ್ಯಾನ್(Scan) ಮಾಡಿ ನೋಡಿದ್ದಾರೆ. ಸ್ಕ್ಯಾನ್(Scan)ಎಂಬ ಪದ ಆಂಗ್ಲ ವೈದ್ಯರಿಗೆ 1970 ಪ್ರಾಂತದಲ್ಲಿ ತಿಳಿದು ಬಂದಿದೆ. ನಾಲಕ್ಕು ಸಂದರ್ಭಗಳಲ್ಲಿ ಮೃತ್ಯುವನ್ನು ಜಯಿಸಿದ್ದಾರೆ. ಕಣ್ಣಿಗೆ ಸಂಬಂಧಿಸಿದ ಒಂದು ವಿಚಿತ್ರವಾದ 'ಬೋಲಾತ್ತಾಷನ್ ಐ' ಎಂಬ ಕಣ್ಣಿನ ವ್ಯಾಧಿಯನ್ನು ಕಂಡುಕೊಂಡಿದ್ದಾರೆ.

ಆ ವ್ಯಾಧಿಯ ಒಂದು ಭಾಗವನ್ನು ಕೋಟಿ ಭಾಗಗಳಾಗಿಮಾಡಿ ಆಕೋಟಿಯಲ್ಲಿ ಒಂದು

ಭಾಗವನ್ನು ತೆಗೆದು, ಅದನ್ನೇ ಮತ್ತೆ ಕೋಟಿಭಾಗಗಳಾಗಿ ಮಾಡಿ ಅದರಲ್ಲಿ ಒಂದು ಭಾಗಕ್ಕೆ ಚಿಕಿತ್ಸೆ ಮಾಡಿದ್ದಾರೆ. ಈ ವಿಷಯವನ್ನು ಗುಂಟೂರು ಸರ್ಕಾರಿ ಆಸ್ಪತ್ರೆ ಕಣ್ಣು ವೈದ್ಯರನ್ನು, ತಿರುಪತಿ ರುಯಾ ಆಸ್ಪತ್ರೆ ಕಣ್ಣು ವೈದ್ಯರನ್ನು ಸಂದರ್ಶಿಸಿದಾಗ 'ಸದ್ಯದಲ್ಲಿ ನಾವೇನು ಹೇಳಲಾರೆವು, ಹೇಳಲು ಸಾಧ್ಯವಿಲ್ಲ. ಇಂತಹ ಸೂಕ್ಷ್ಮಾತಿಸೂಕ್ಷ್ಮವಾಗಿ ಪರಿಶೀಲಿಸಿ ಕಣ್ಣಿಗೆ ವೈದ್ಯಮಾಡಲು ಆಂಗ್ಲವೈದ್ಯರಿಗೆ ಇನ್ನು 20ವರ್ಷಗಳು ಆಗಬಹುದು ಎಂದಿದ್ದಾರೆ.

4. ಯಾವಾಗ ಈಯೋಗ ಆರಂಭಿಸಲಾಗಿದೆ?

ದಕ್ಷಿಣ ಭಾರತ ದೇಶದಲ್ಲಿ ಕುಂಭಕೋಣಂ ಎಂಬ ಊರಿನಲ್ಲಿ ಕೀಳ್ ಡಬೀರ್ ತೆರು(ಪೂರ್ವ ಡಬೀರ್ ಬೀದಿ) ಹಳೆಯ ನಂ.-64, ಹೊಸ ನಂ.-65 ಮನೆಯಲ್ಲಿ 1900ನೆ ವರ್ಷದಲ್ಲಿ ಆರಂಭಿಸಿದ್ದಾರೆ. ಅವರು ಪ್ರಾಕ್ಟೀಸ್ ಮಾಡಿ ಸ್ವಲ್ಪ ಅಭಿವೃದ್ಧಿಯನ್ನು ಹೊಂದಿದ ಬಳಿಕ 30-5-1910ರಲ್ಲಿ ರಾತ್ರಿ ಗಂ॥8.30ನಿ॥ಗಳಿಗೆ ಸೃಷ್ಟಿಕರ್ತ ರಲ್ಲಿ ಸಿ.ವಿ.ವಿ. ಅವರಿಗೆ ಸಂಬಂಧ ಏರ್ಪಟ್ಟಿತು. ಆದ್ದರಿಂದ ಆ ದಿನವನ್ನು 'ಲಿಂಕ್ ವಿತ್ ಆರಿಜನ್ ಡೇ(Link with Origin Day) ಎಂದು ಕರೆಯ ಲಾರಂಭಿಸಿದ್ದಾರೆ.

5. ಏಕೆ ಈಯೋಗವು ಕುಂಭಕೋಣಂ ನಲ್ಲೇ ಪ್ರಾರಂಭಿಸಿದ್ದಾರೆ?

ರಾಕ್ಷಸರು, ದೇವತೆಗಳು ಕ್ಷೀರ ಸಾಗರವನ್ನು ಮಥಿಸಿದ್ದಾರೆ(ಕಡೆದಿದ್ದಾರೆ). ಅದರಲ್ಲಿ ಅಮೃತವು ಲಭಿಸಿದೆ. ಆ ಅಮೃತವನ್ನು ಕುಡಿದವರಿಗೆ ಸಾವಿಲ್ಲ. ಆ ಅಮೃತ ಭಾಂಡವನ್ನು ಕುಂಭಕೋಣಂ ನಲ್ಲಿ ಕುಂಭೇಶ್ವರಸ್ವಾಮಿ ದೇವಾಲಯವು ನಿರ್ಮಿಸುತ್ತಿದ್ದಾಗ ಕೆಳಗಿನ ಭಾಗದಲ್ಲಿ ಇಟ್ಟು ಅದರ ಮೇಲೆ ದೇವಾಲಯವನ್ನು ನಿರ್ಮಿಸಿದ್ದಾರೆಂದು ಟೆಂಪುಲ್ ಸಿಟಿ ಚರಿತ್ರೆ(Temple City History) ತಿಳಿಸುತ್ತದೆ. ಅದಕ್ಕಾಗಿ ಆ ಊರಿಗೆ ಕುಂಭಕೋಣಂ ಎಂದು ಹೆಸರು ಬಂದಿದೆ. ಸಾವನ್ನು ತಪ್ಪಿಸಬೇಕೆಂಬ ಸಂಕಲ್ಪದಿಂದ ಈ ಯೋಗವನ್ನು ಪ್ರಾರಂಭಿ ಸಿದ್ದಾರೆ. ಅದೇ ಮಾಸ್ಟರ್ ಸಿ.ವಿ.ವಿ. ಅವರ 'ಭೃಕ್ತ ರಹಿತ ತಾರಕ ರಾಜಯೋಗ'ವು.

6. ಪ್ರಾರ್ಥನೆ(ಪ್ರಾಕ್ಟೀಸು) ಮಾಡಲು ಪದ್ಧತಿ ಏನು?

ನೀವು ಮುಖ್ಯವಾಗಿ ಮಾಡಬೇಕಾದ್ದು ನಿಮ್ಮ ಶರೀರದಲ್ಲಿ ಏನು ನಡಿಯುತ್ತಿದೆ? ಎಲ್ಲಿ ನಡೆಯುತ್ತಿದೆ? ಎಂಬುದನ್ನು ಏಕಾಗ್ರತೆಯಿಂದ ದಿನವೂ ಗಮನಿಸ ಬೇಕು. ಸಾಧಕನು ಅತನಿಗೆ ಅನುಕೂಲವಾಗಿ ಇರುವ ಹಾಗೆ ಕೂರಬೇಕು. ಸ್ನಾನ, ಅಲ್ಪಾಹಾರ, ಕಾಫಿ ಮುಂತಾದವುಗಳು ಸೇವಿಸಿ ಕೂರಬೇಕು.

ಅ. ಬೇರೆವಿಧವಾದ ಪೂಜೆಗಳು ಮುಂತಾದವುಗಳು ಈ ಯೋಗವನ್ನು ಮಾಡುವವರು

ಮಾಡಬಾರದು.

ಆ. ಇತರೆ ಮಂತ್ರಗಳನ್ನು ಉಚ್ಚರಿಸ ಬಾರದು.

ಇ. 45ನಿಮಿಷಗಳು ಕ್ರಮವಾಗಿ ಖಚಿತವಾಗಿ ಪ್ರಾರ್ಥನೆ ಮಾಡಬೇಕು.

ಈ. ದಿನಕ್ಕೆ ಮೂರು ಪರ್ಯಾಯಗಳು ಪ್ರಾರ್ಥನೆ ಮಾಡಬೇಕು.

ಬೆಳಿಗ್ಗೆ 4ಘಂಟೆಗಳಿಂದ 8ಘಂಟೆಯ ಒಳಗೆ ಒಂದು ಪರ್ಯಾಯ, ಸಾಯಂಕಾಲ 6ಘಂಟೆಯಿಂದ 8ಘಂಟೆಯ ಒಳಗೆ ಎರಡನೆ ಪರ್ಯಾಯ, ರಾತ್ರಿ ಮಲಗುವ ಮುನ್ನ ಒಂದು ಪರ್ಯಾಯ, ರಾತ್ರಿ ಪ್ರಾರ್ಥನಾ ಸಮಯದಲ್ಲಿ ಬೆಳಗಿನಿಂದ ನಾವು ಮಾಡಿದ ಕೆಲಸಗಳನ್ನು ನೆನಪು ಮಾಡಿಕೊಂಡು ಸತ್ಯಕ್ಕೆ, ಧರ್ಮಕ್ಕೆ ವಿರುದ್ಧವಾಗಿ ಏನಾದರೂ ನಡೆಮ ಕೊಂಡಿದ್ದರೆ ಆ ವಿಷಯಗಳನ್ನು 'ಮಾಸ್ಟರ್ ಸಿ.ವಿ.ವಿ.' ಅವರಿಗೆ ಭಿನ್ನವಿಸಿಕೊಂಡು ಕ್ಷಮಿಸಿ ಎಂದು ಇನ್ನು ಮೇಲೆ ಆತಪ್ಪುಗಳನ್ನು ಮಾಡದಂತೆ ತಿದ್ದಿರಿ ಎಂದು ಪ್ರಾರ್ಥಿಸಬೇಕು.

ಅವರು ಕ್ಷಮಿಸಿ ಸರಿಪಡಿಸುತ್ತಾರೆ. ಸ್ಥಾನಿಕ ಕಾಲಮಾನದ ಪ್ರಕಾರ ಪ್ರಾರ್ಥನೆ ಮಾಡುವುದು.

ಉ. ಬೆಳಿಗ್ಗೆ 4ಘಂಟೆಯಿಂದ ಸಾಯಂಕಾಲ 4ಘಂಟೆಯವರಿಗೆ ಸೂರ್ಯನು ಲೋಕವನ್ನು ಪರಿಪಾಲಿಸುತ್ತಾನೆ.

ಊ. ಸಾಯಂಕಾಲ 4ಘಂಟೆಯಿಂದ ಬೆಳಿಗ್ಗೆ 4ಘಂಟೆಯವರೆಗೆ ಚಂದ್ರನು ಲೋಕವನ್ನು ಪರಿಪಾಲಿಸುತ್ತಾನೆ.

ಋ. ಒಂದುಬಾರಿ ಮಾಡಿದ ಪ್ರಾರ್ಥನೆ ಒಂದು ಜನ್ಮದ ಕರ್ಮವನ್ನು ತೊಲಗಿಸುತ್ತದೆ.

ೠ. ರೂಲ್ಸುಗಳು-ರೆಗ್ಯುಲೇಷನ್ಸ್‌ನ್ನು ಅತಿಕ್ರಮಿಸದೆ ಕನಿಷ್ಟ 10ವರ್ಷಗಳು ಪ್ರಾಕ್ಟೀಸು ಮಾಡಿದರೆ ರೋಗಗಳು, ಮುಪ್ಪು ಇಲ್ಲದೆ ಶಾಶ್ವತವಾಗಿ ಜೀವಿಸುವ ಶಕ್ತಿ ಬರುತ್ತದೆ.(ಉ.ಮಾಸ್ಟರ್ ಅವರ ಸಂಪೂರ್ಣ ಸಾಹಿತ್ಯ)

7. ನಾನು ಎಲ್ಲಿ ಪ್ರಾರ್ಥನೆ ಮಾಡಬೇಕು?

1. ಇಲ್ಲಿ ಹೇಳಲ್ಪಟ್ಟ ಪ್ರದೇಶಗಳು ಎಂದರೆ, ಹೂಬಿಡುವ ತೋಟ, ಚೊಕ್ಕವಾದ ಕೊಠಡಿ, ಅದು ಚೊಕ್ಕಟವಾಗಿ ಇರಬೇಕು. ಒಳ್ಳೆಯ ಸುವಾಸನೆ ಯನ್ನು ಸೂಸುತ್ತ ಇರಬೇಕು. ಈ ಎರಡರಲ್ಲಿ ಯಾವುದು ನಿಮಗೆ ಅನುಕೂಲ ವಾಗಿರುತ್ತದೋ ಅದನ್ನು ಆರಿಸಿಕೊಳ್ಳಿ. (ಮಹಾತ್ಮಾ ಲೆಟರ್ಸ ಪುಟ-28)

ಪರಿಶುಭ್ರ ವಾಗಿರದೆ ಇರುವ ಪ್ರದೇಶಗಳಲ್ಲಿ, ಆರ್ದ್ರವಾದ ಹೃದಯವಿಲ್ಲದವರು, ಸಭ್ಯತೆ ಇಲ್ಲದವರು ಇರುವ ಜಾಗದಲ್ಲಿ,ಭಗವಂತನ ಮೇಲೆ ನಂಬಿಕೆಇಲ್ಲದವರು ಇರುವ ಜಾಗದಲ್ಲಿ ಪ್ರಾರ್ಥನೆ ಮಾಡಬಾರದು. ಪ್ರಾರ್ಥನೆ ಮಂದಿರವನ್ನು ಅತಿಜಾಗ್ರತೆ ಯಾಗಿ, ಪರಿಶುಭ್ರವಾಗಿ ಚೊಕ್ಕಟವಾಗಿ ಇಡಬೇಕು. ಅತಿಯಾಗಿ ಸುವಾಸನೆಗಳು ಇರಬಾರದು. ಲಘುವಾಗಿ ಸುವಾಸನೆ

ಇರಬೇಕು. ಆಗಲೇ ಆರೂಮಿನಿಂದ 'ಆರಾ' ಉತ್ಪತ್ತಿಯಾಗುತ್ತದೆ. ಆ ಆರಾ ಜೀರ್ಣವಾಗದ್ದನ್ನು ಜೀರ್ಣಆಗುವಹಾಗೆ ಮಾಡುತ್ತದೆ, ಎಂದರೆ ಪೂರ್ವಜನ್ಮದ ಪಾಪಕರ್ಮಗಳನ್ನು, ವ್ಯಾಧಿಗಳನ್ನು, ಕಷ್ಟಗಳನ್ನು ತೊಲಗಿಸುತ್ತದೆ ಎಂದು. ಆ ರೂಮಿನಲ್ಲಿ ಯಾವುದೇ ಶಬ್ದವಿಲ್ಲದಂತೆ ನೋಡಬೇಕು.

ಪ್ರತ್ಯಕ್ಷವಾಗಿ ಹೇಳುತಿದ್ದೇನೆ. ಪ್ರಾರ್ಥನೆಯ ಸಮಯದಲ್ಲಿ ಯಾವವಿಧವಾದ ಶಬ್ದವೂ ಇರಬಾರದು(ಮಹಾತ್ಮ ಲೆಟರ್ಸು ಪುಟ.3).

ಪ್ರಾರ್ಥನೆಯ ರೂಮು ಎಷ್ಟು ಶುಭ್ರವಾಗಿ ಇರುವುದಕ್ಕೆ ಸಾಧ್ಯವೋ ಅಷ್ಟು ಶುಭ್ರವಾಗಿ ಇಡಬೇಕು. ಆಗಲೇ 'ಆರಾ' ಹುಟ್ಟುತ್ತದೆ. ಆ ಆರಾ ಪೂರ್ವಜನ್ಮ ಕರ್ಮಗಳನ್ನು ವ್ಯಾಧಿಗಳನ್ನು, ಕಷ್ಟಗಳನ್ನು ಮೂರುಸಾವಿರ ನಾಲ್ಕುನೂರ 9 ಪಾಯಿಂಟ್ಸು 5ನಾಟ್ಸ್ ಬೈ 9 (349.5/9)ತೊಲಗಿಸುತ್ತದೆ.(ಉ. ಮ.ಲೆ.ಪುಟ.289).

ಕುಡುಕರನ್ನು, ಚುಟ್ಟ, ಬೀಡಿ ಕುಡಿಯುವವರು ಇನ್ನೂ ಕೆಟ್ಟ ಹವ್ಯಾಸಗಳಿರುವವರು ಸರಿಹೋಗ ಬೇಕೆಂದು ಕೊಂಡರೆ, ಅಂತಹವರು ಸಹ, ಈ ಆರಾ ಇರುವ ರೂಮಿನೊಳಗೆ ಬರಬೇಕೆಂದು ರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ ಪ್ರಾರ್ಥನೆ ಮಾಡಿರೆಂದು ಹೇಳುವುದು. ಆವಿಧವಾಗಿ ಮಾಡಿದರೆ ಅವರ ಶರೀರದಲ್ಲಿ ಶಕ್ತಿ ಪ್ರವೇಶಿಸಿ, ಅವರು ಅಭಿವೃದ್ಧಿ ಹೊಂದುವರು. ಅದು ಅವರಿಗೆ ತಿಳಿಯುತ್ತದೆ(ಮಹಾತ್ಮ ಲೆಟರ್ಸು ಪುಟ.423).

ನನ್ನ ರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ ಪ್ರಾರ್ಥಿಸುವವರನ್ನು ನೋಡಿದ ಕೂಡಲೇ ವರ್ಚಸ್ಸಿನಿಂದ ಚೊಕ್ಕವಾಗಿ ಕಾಣಿಸುತ್ತಾರೆ. ಈ ಯೋಗಕ್ಕು ಬರುವ ಮುನ್ನ ನಿಮಗೆ ಈ ವರ್ಚಸ್ಸು ಇದ್ದಿತ್ತಾ? ನನಗ ತಿಳಿಸಿ, ನಾನು ಸಂತೋಷಿಸುವೆನು. ನಿಮ್ಮ ಆರಾಗೆ ಬಿಟ್ಟುಬಿಡುವೆನು(ಮಹಾತ್ಮ ಲೇಟರ್ಸು ಪುಟ.547).

ಅತಿ ಕಮ್ಮಿ ಬೆಳಕು ಇರುವ ಕೊಠಡಿಯಲ್ಲಿ ಪ್ರಾರ್ಥನೆ ಮಾಡಬೇಕು. ಆಗಲೇ ನೀವು ಎಷ್ಟೋ ಅಪೂರ್ವವಾದ ವಿಷಯಗಳುನ್ನು ಪ್ರತ್ಯಕ್ಷವಾಗಿ ನೋಡಬಲ್ಲಿರಿ.

ಬೆಳಕಿನಲ್ಲಿ ಪ್ರಾರ್ಥಿಸಿದರೆ ನೀವು ಅಪೂರ್ವವಿಷಯಗಳನ್ನು ನೋಡಲಾಗುವುದಿಲ್ಲ. ಆದ್ದರಿಂದ ಅತಿ ಕಮ್ಮಿ ಬೆಳಕು ಇರುವ ಕೊಠಡಿಯಲ್ಲಿ ಸಾಧನೆ ಮಾಡುವುದು.(ಮಹಾತ್ಮ ಲೆಟರ್ಸ್ ಪುಟ.174).

ಪ್ರಾರ್ಥನೆಯನ್ನು ಬರಿನೆಲದ ಮೇಲೆ ಕೂತುಮಾಡಬಾರದು, ಚಾಪೆಯ ಮೇಲಾಗಲಿ, ಜಮಖಾನದ ಮೇಲಾಗಲಿ ಇನ್ನು ಯಾವುದರ ಮೇಲಾದರು ಕೂತು ಮಾಡಬೇಕು. ಕಬ್ಬಿಣದ ಮೇಲಿ ಕೂತುಕೊಳ್ಳಬಾರದು.

8. ನ್ಯೂಯೋಗವನ್ನು ಹೇಗೆ ಪ್ರಾಕ್ಟೀಸ್ ಮಾಡಬೇಕು?

ನೀನು 10ವರ್ಷಗಳು ಕ್ರಮ ತಪ್ಪದೆ ಪ್ರಾಕ್ಟೀಸು ಮಾಡುವೆನೆಂದು ನಿರ್ಣಯಿಸಿಕೊಂಡು,

'ಮಾಸ್ಟರ್ ಅವರ' ರೂಲ್ಸ್-ರೆಗ್ಯುಲೇಷನ್ಸ್ ಗಳನ್ನು ಪೂರ್ತಿಯಾಗಿ ಪಾಲಿಸಿ, ಅಭಿವೃದ್ಧಿ ಹೊಂದಿದವರ ಬಳಿ ಉಪದೇಶವನ್ನು ಪಡೆದು ಪ್ರಾರ್ಥನೆ ಮಾಡಬೇಕು. 'ಮಾಸ್ಟರ್‌ಅವರು' ಕೊಟ್ಟರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ ಒಂದು ನಿರ್ಣಯದಿಂದ ಪ್ರಾರ್ಥನೆಗೆ ಕೂತು ಅಂತರಾತ್ಮ ಪರಿಶೀಲನೆ ಮಾಡಬೇಕು. ವೆಬ್‌ಸೈಟ್‌ನ ಪ್ರಾರ್ಥನೆಯ ಮೂಲಕ ನಿಮಗೆ ಯಾವವಿಧವಾದ ಅಭಿವೃದ್ಧಿ ಹೊಂದದೆ ಹೋದರೆ ಈ-ಮೆಯಿಲ್ ಮೂಲಕ ಕೆಳಗಿನ ವರನ್ನು ಸಂಪರ್ಕಿಸಿ.
e-mail:-avsacharyulu@mastercvv.org. , webmaster@mastercvv.org.
ಅವರು ನಿಮ್ಮ ಅಭಿವೃದ್ಧಿಗೆ ಮಾರ್ಗಗಳನ್ನು ತೋರಿಸುವರು.

1. ಪ್ರಾರ್ಥನೆ ಮಾಡುವುದಕ್ಕೆ 15 ನಿಮಿಷಮುಂಚೆ ಬಂದು ಕೂರಬೇಕು. ಕೂತಾಗಲಿ, ಮಲಗಿ ಆಗಲಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಪ್ರಾರ್ಥಿಸಬೇಕು. ಬಂದಕೊಡಲೆ 'ಮಾಸ್ಟರ್ ಸಿ.ವಿ.ವಿ. ಅವರ' ಫೋಟೊ ತದೇಕ ಧ್ಯಾನದಿಂದ ನೋಡುತ್ತಾ ಸಮಯವಾದ ಮೇಲೆ ಪ್ರಾರ್ಥನೆಯನ್ನು ಪ್ರಾರಂಭಿಸಬೇಕು. ಫೋಟೋ ಇಲ್ಲದಿದ್ದರೆ 15 ನಿಮಿಷಗಳು ಮನಸ್ಸಿನಲ್ಲಿ ಯಾವವಿಧವಾದ ಆಲೋಚನೆಗಳು ಇಟ್ಟುಕೊಳ್ಳದೆ ಪ್ರಶಾಂತವಾಗಿ ಕೂತುಕೊಳ್ಳಿ, ಆನಂತರ ಪ್ರಾರ್ಥಿಸಿರಿ. (ಡೈ. ಪುಟ.135).

(ಈ ಕೆಳಕಂಡಂತೆ ಮನಸ್ಸಿನಲ್ಲಿ ಒಂದೇಬಾರಿ ಸ್ಮರಿಸಿರಿ. ಪದೇಪದೇ ಸ್ಮರಿಸಬೇಡಿ. ಗಟ್ಟಿಯಾಗಿ ಉಚ್ಚರಿಸ ಬೇಡಿ.)

ಸತ್ಸಂಕಲ್ಪದಿಂದ ಈವಿಧವಾಗಿ ಪ್ರಾರ್ಥಿಸಿರಿ.

ಪ್ರಾರ್ಥನೆ

ಮಾಸ್ಟರ್ ಸಿ.ವಿ.ವಿ. ನಮಸ್ಕಾರಗಳು

(ನಿಮ್ಮ ಸಂಕಲ್ಪ ಹೀಗೆ ಇರಬೇಕು)

"ನಾನು, ಈ ಪ್ರಪಂಚವೂ ಸುಖವಾಗಿ ಇರಬೇಕು. ಪೂರ್ವಜನ್ಮ ಕರ್ಮ, ಈ ಜನ್ಮ ಕರ್ಮ ತೊಲಗಿ ಹೋಗಬೇಕು. ನನ್ನ ಈ ಜನ್ಮಕ್ಕೆ ಒಂದು ಅಣುವು ಕಾರಣವು. ಆ ಅಣುವು ಎಷ್ಟೋ ಜನ್ಮಗಳಿಂದ ಎಷ್ಟೋ ಪಾಪಗಳನ್ನು ಹೊತ್ತುಬಂದು, ಈ ಜನ್ಮದಲ್ಲಿ ಕಷ್ಟಗಳು, ರೋಗಗಳನ್ನು ಉಂಟು ಮಾಡುತ್ತಿದೆ. ಆ ಅಣುವಿನಲ್ಲಿನ ದೋಷವನ್ನು ತೊಲಗಿಸಿ, ನನಗೆ ತಕ್ಷಣ ಸ್ವಸ್ಥತೆಯನ್ನು ನೀಡಿರಿ, ರಕ್ತ-ಮಾಂಸಾದಿಗಳಿಂದ ಕೂಡಿದ ಈ ಶರೀರದಲ್ಲೇ ನಾನು 'ಎಟರ್ನಿಟಿ'ಯನ್ನು, ಮರುಜನ್ಮದಲ್ಲಲ್ಲ, ಈ ಜನ್ಮದಲ್ಲೇ 'ಶಾಶ್ವತತ್ವವನ್ನು' ಹೊಂದುವಹಾಗೆ ಅನುಗ್ರಹಿಸಿರಿ." ಎಂದು ಪ್ರಾರ್ಥಿಸುತ್ತಿದ್ದೇನೆ.

ಮಾಸ್ಟರ್ ಅವರೇ ! ನೀವು ಸಶರೀರವಾಗಿ ಅವತರಿಸಿ, 'ಎಟರ್ನಿಟಿ'ಯನ್ನು

ಭೂಮಿಯಮೇಲೆ ನೆಲಸ ಬೇಕೆಂದು ಪ್ರಾರ್ಥಿಸುತ್ತೇನೆ. ನಮಸ್ಕಾರಗಳು.

<u>ಗಮನಿಸಿ:</u>

ಯಾರಾದರೂ ಬಲಹೀನವಾಗಿ ಇದ್ದರೂ ಸಹಾ, ವ್ಯಾಧಿಯಿಂದ ಬಾಧೆಪಡು ತ್ತಿದ್ದರೂ ಕೂಡ, ಮಲಗಿಕೊಂಡು, ಈ ಕೆಳಕಂಡಂತೆ ಪ್ರಾರ್ಥಿಸಬೇಕು.

1. ನಿಮಗಿದ್ದ ವ್ಯಾಧಿಗಳೆಲ್ಲವನ್ನು ಮಾಸ್ಟರ್ ಅವರಿಗೆ ಬಿನ್ನವಿಸಿಕೊಂಡು ಕೂಡಲೇ ನಿವಾರಣೆಯಾಗ ಬೇಕೆಂದು ಪ್ರಾರ್ಥಿಸಿರಿ.
2. ಯಾರಾದರೂ ಬಲಹೀನವಾಗಿ ಇದ್ದರೆ ಮಲಗಿ, ಮಾಸ್ಟರ್! ನನಗೆ ಪ್ಲೆಂಟಿ ಆಫ್ ಪ್ರಾಣ ಸಪ್ಲೈ(Plenty of Prana Supply) ಇನ್ನೂ ವಿಗರ್ ಸಪ್ಲೈ(Vigour Supply) ಪ್ರಸಾದಿಸಿರಿ ಎಂದು ಪ್ರಾರ್ಥಿಸಿರಿ.

9. ಅಂತರಾತ್ಮ ಪರಿಶೀಲನೆ ಹೇಗೆ ಮಾಡಬೇಕು?

ಒಂದು ದಿವ್ಯವಾದ ಶಕ್ತಿ ನಿಮ್ಮ ತಲೆಯ ಮೇಲೆ ಸ್ಪರ್ಶಿಸುತ್ತದೆ. ಅಲ್ಲಿಂದ ತಲೆಯ ಸುತ್ತಾ ತಿರುಗಿ, ಕಣ್ಣಿನಲ್ಲಿ ಸೇರುವುದು, ಅಲ್ಲಿಂದ ಬಲಗೈ ಬೆರಳು ಕೊನೆಯವರೆಗೂ ತಲುಪಿ, ಮೇಲೆ ತಿರುಗಿ ಬಂದು ಎಡಗೈ ಬೆರಳು ಕೊನೆಯವರೆಗೂ ತಲುಪಿ, ಮೇಲೆ ತಿರುಗಿ ಬಂದು ಹಾರ್ಟ್ ಲಂಗ್ಸ್‌ಗಳನ್ನುಸ್ಪರ್ಶಿಸಿ ಆಹಾರನಾಳದಿಂದ ಕುಂಡಲಿನಿ ಯೊಳಗೆ ಪ್ರವೇಶಿಸುವುದು. ಈ ಕುಂಡಲಿನಿ ಎನ್ನುವುದು ಮೂತ್ರ ಕೋಶಕ್ಕೆ, ಪುರೀಷಕೋಶಕ್ಕೆ ಮಧ್ಯೆ ಸೂಕ್ಷ್ಮಾತಿ ಸೂಕ್ಷ್ಮವಾದ ಅಣುವಾಗಿ ಇರುತ್ತದೆ. ಈ ಪ್ರಕ್ರಿಯೆ ಎಲ್ಲಾ ನರಗಳ ಮೂಲಕ ನಡೆಯುವುದು ಸೂಕ್ಷ್ಮಾತಿ ಸೂಕ್ಷ್ಮವಾದ ಸ್ಪಂದನದಿಂದ ಕೂಡಿರುತ್ತದೆ. ಈ ಪ್ರಕ್ರಿಯೆ ಇದನ್ನು ನಾವು ಅತಿ ಜಾಗ್ರತೆ ಯಾಗಿ ಗಮನಿಸಬೇಕು. ಕುಂಡಲಿನಿಯಿಂದ ಬರುವ ಶಕ್ತಿ ಪ್ರಾಕ್ಟೀಸ್ ಮಾಡುವವನು ತಡೆಯುವಷ್ಟು ಸ್ಪಂದನಗಳನ್ನು ಉಂಟುಮಾಡುತ್ತದೆ. ಅಲ್ಲಿಂದ ಆ ಶಕ್ತಿ, ಭಗವಂತನು ಶಕ್ತಿಯನ್ನು ಉಪಯೋಗಿಸುವಂತೆ ಕೆಲಸ ಮಾಡುತ್ತದೆ. ಹೇಗೆ ಅಂತರಾತ್ಮ ಪರಿಶೀಲನೆ ಮಾಡಬೇಕೋ 'ಮಹಾತ್ಮ', ಮಾಸ್ಟರ್ ಸಿ.ವಿ.ವಿ. ಅವರಿಗೆ ತಿಳಿಸಿದ್ದಾರೆ.(ಉ.ಡೈರಿ ಪುಟ.354,355,414).

ಪ್ರಾಕ್ಟೀಸ್ ಮಾಡುವಾಗ ಕೆಳಗಿನ ಪರಿಸರಗಳಲ್ಲೂ ಕೂಡ ಗಮನಿಸಿ(ಭಾಗಗಳಲ್ಲಿ)

1. ತಲೆ-ಕಣ್ಣಿನ ಹುಬ್ಬು-ತಲೆಯ ಸುತ್ತಾ-ಕಣ್ಣುಗಳು-ಗಲ್ಲ-ಕತ್ತು-ಭುಜಗಳು ಹೃದಯ, ಹೊಟ್ಟೆ-ಆಹಾರನಾಳ, ಕಿಡ್ನಿಗಳು, ಬೆನ್ನೆಲುಬು-ಪುರುಷಾಂಗವು ಬೀಜಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮವಾಗಿ ಜರುಗುವ ಪ್ರಕ್ರಿಯೆಯನ್ನು ಗಮನಿಸುವುದು.
2. ತಲೆಯ ಮೇಲೆ, ತಲೆಯ ಕೆಳಗೆ, ಇಂಟಲೆಕ್ಟ್ ಭಾಗ, ಹಾರ್ಟ್ ಹೊಕ್ಕಳು, ಹೊಟ್ಟೆ, ಬೀಜಗಳಲ್ಲಿ ಗಮನಿಸಬೇಕು.

10. ಪ್ರಾರ್ಥನೆ ಪ್ರಾರಂಭಿಸಿದ ಕೂಡಲೆ ಏನು ನಡೆಯುತ್ತದೆ?

'ಮಾಸ್ಟರ್ ಅವರ' ರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ ಪ್ರಾರ್ಥನೆ ಪ್ರಾರಂಭಿಸಿದರೆ ಕೂಡಲೆ ಶರೀರವೆಲ್ಲಾ 'ಥಟ್ಟನೆ' ಕದಲಿಸಿದಂತೆ ಆಗುತ್ತದೆ. ಆನಂತರ ಶರೀರದಲ್ಲಿ ಸ್ಪಂದನಗಳು ತಿಳಿಯುತ್ತದೆ. ಮಾಸ್ಟರ್ ಅವರು 30ಸಾವಿರ ವಿಧಗಳ ಸ್ಪಂದನಗಳು(Vibrations)ಇದೆ ಎಂದಿದ್ದಾರೆ, ಅದರಲ್ಲಿ ಯಾವುದೋ ಒಂದು ನಿಮಗೆ ಬರಬಹುದು. ಎಷ್ಟೋ ವಿಧಗಳ ಶರೀರ ಭಂಗಿಮೆಗಳು ಬರಬಹುದು. ಒಂದೊಂದು ಸಾರಿ ಷಾಕ್ ಹೊಡೆದಂತೆ ಇರುತ್ತದೆ. ಕೆಲವರಿಗೆ ಈಗ ಜರುಗುವುದು, ಜರಿಗಿದ್ದು, ಮುಂದೆ ಜರುಗುವುದು(ಸಿನಿಮಾಹಾಗೆ) ಕಣ್ಣಿಗೆ ಕಾಣಿಸುತ್ತದೆ. ಕೆಲವು ಸೂಚನೆಗಳು(Symbolic) ಸಾಂಕೇತಿಕವಾಗಿ ತಿಳಿಯುತ್ತದೆ. ಪರಿಪೂರ್ಣವಾದ ವಿಶ್ವಾಸದಿಂದ, ಏಕಾಗ್ರತೆಯಿಂದ, ಕ್ರಮ ತಪ್ಪದೆ ಪ್ರಾರ್ಥಿಸಿದರೆ, ಪೂರ್ತಿ ಪ್ರಜ್ಞೆಯಲ್ಲಿರುವಾಗಲೇ, ಮೇಲಿನ ವಿಷಯಗಳೆಲ್ಲಾ ತಿಳಿಯುತ್ತದೆ.

ಬೇರೆ ಯೋಗಗಳಲ್ಲಿ ಅತ್ಯುನ್ನತವಾದುದು ಸಮಾಧಿಸ್ಥಿತಿ. ಆ ಸ್ಥಿತಿಗೆ ಸೇರಿದ ಸಾಧಕನು ಪ್ರಜ್ಞೆಯನ್ನು ಕಳೆದುಕೊಳ್ಳುವನು. ಆ ಸಮಯದಲ್ಲಿ ಅವನ ಶರೀರದಲ್ಲಾಗಲಿ, ಅವನ ಅಭಿವೃದ್ಧಿಯಲ್ಲಾಗಲಿ, ಏನು ನಡೆದಿದೆ ಎಂದು ಅವನಿಗೆ ತಿಳಿಯದು. ಸ್ಪೃಹೆ ಬಂದ ನಂತರ ಏನು ಜರುಗಿತೆಂದು ಹೇಳಲಾರ. ಅದೇ ಸಮಾಧಿಸ್ಥಿತಿ, ಈ ಯೊಗದಲ್ಲಿ ಲಭಿಸಿದ, ಸಾಧಕನು ಪ್ರಜ್ಞೆಯನ್ನು ಕಳೆದುಕೊಳ್ಳದೆ ಅವನು ಪ್ರತ್ಯಕ್ಷವಾಗಿ ನೋಡಬಲ್ಲನು, ತಿಳಿದುಕೊಂಡದ್ದನ್ನು ಹೇಳಬಲ್ಲನು. ಅದೇ ಈ ಯೋಗದಲ್ಲಿರುವ 'ವಿಶಿಷ್ಟತೆ'. ನಿನಗೆ ಸಂಪೂರ್ಣ ವಿಶ್ವಾಸವಿದ್ದರೆ ಎಲ್ಲಾ ವ್ಯಾಧಿಗಳು, ಬಾಧೆಗಳು ತೋಲಗಿ ಹೋಗುವುದು. ನೀನು ಅಭಿವೃದ್ಧಿ ಹೊಂದಿರುವೇ ಎಂಬುದಕ್ಕೆ ಗುರುತು, ನೀನು ಕಷ್ಟಗಳಿಂದ, ಬಾಧೆಗಳಿಂದ ತಪ್ಪಿಸಿ ಕೂಳ್ಳುವುದೇ. 'ಮಾಸ್ಟರ್ ಸಿ.ವಿ.ವಿ. ಅವರ' 'ಪ್ರಾಕ್ಟೀಸ್ ಮಾನವನನ್ನು ಸರಿಪಡಿಸುತ್ತದೆ' ಎಂದಿದ್ದಾರೆ. ಪ್ರಾರ್ಥನೆ ಮಾಡದೆಯೆ, ಮಾಡಿದೆನು ಎಂದು ಸುಳ್ಳು ಹೇಳದೆ ಕ್ರಮ ತಪ್ಪದಂತೆ ಅತ್ಯಂತ ವಿಶ್ವಾಸದಿಂದ ಪರಿಶುದ್ಧವಾದ ಮನಸ್ಸಿನಲ್ಲಿ ಪ್ರಾರ್ಥನೆ ಮಾಡಬೇಕು. ಒಂದೊಂದುಬಾರಿ ಇದ್ದಕ್ಕಿದ್ದಂತೆ, ಕೆಲವರಿಗೆ, ಅವರು ಪೂರ್ವಜನ್ಮದಲ್ಲಿ ಮಾಡಿದ ಯೋಗಫಲದಿಂದ ಕೂಡಲೆ ಅಭಿವೃದ್ಧಿ ಆಗುತ್ತದೆ.

11. ಈ ಯೋಗವನ್ನು ಯಾರು ಮಾಡಬಹುದು?

'ಮಾಸ್ಟರ್ ಅವರ' ಆಶಯದ ಪ್ರಕಾರ ಈ ಯೋಗವು ಪ್ರಪಂಚದಲ್ಲಿನ ಮಾನವರೆಲ್ಲಾ ಯಾವ ಜಾತಿಯವರಾದರೂ ಜಾತಿ, ಮತ, ಕುಲ ವಿಚಕ್ಷಣೆ ಇಲ್ಲದೆ ಎಲ್ಲರೂ ಮಾಡಲು ಅರ್ಹರೇ. 10ವರ್ಷಗಳು ತಪ್ಪದೆ ಪ್ರಾಕ್ಟೀಸ್ ಮಾಡುವೆನೆಂದು ನಿರ್ಣಯಿಸಿಕೊಂಡು ಮಾಡಬೇಕು.

ಈ ಕೆಳಗಿನವರು ಈ ಯೋಗವನ್ನು ಮಾಡಲು ಅನರ್ಹರು.

ಮಾಂಸಾಹಾರಿ, ಕುಡುಕರು, ಚುಟ್ಟ-ಬೀಡಿ-ಸಿಗರೇಟು, ಇನ್ನೊ ಉದ್ರೇಕ ವಸ್ತುಂಟು

ಮಾಡುವ ಪದಾರ್ಥಗಳು ಸೇವಿಸುವವರು, ಶೀಲವಿಲ್ಲದವರು, ದುರ್ಮಾರ್ಗದವರು, ಪರಿಹಾಸಮಾಡಿ ಮಾತನಾಡು ವವರು, ವಿಶ್ವಾಸ ಹೀನರು, ಕಳ್ಳಾಟ ಆಡುವವರು, ಸಂಸ್ಕಾರವಿಲ್ಲದವರು, ಇತರರ ಅಭಿವೃದ್ಧಿಯನ್ನು ಸಹಿಸಲಾಗದೇ ಇರುವವರು, ಕೆಟ್ಟಕೆಲಸ ಮಾಡುವವರು, ಚಪಲ ಚಿತ್ತರು, ಉದ್ರೇಕಪರರು, ಕೋಪವುಳ್ಳವರು, ಅಹಂಕಾರವಿರುವವರು, ಕ್ಷಣಿಕೋದ್ರೇಕದವರು, ಸಂಶಯಗ್ರಸ್ಥರು, ಹಗೆ ಸಾಧಿಸಬೇಕು ಎನ್ನುವವರು, ಅಧರ್ಮಪರರು, ಅವನೇ ಶ್ರೇಷ್ಠ ಎಂದು ಹೇಳಿಕೊಳ್ಳು ವವನು-ಇವರು ಈ ಯೋಗವನ್ನು ಮಾಡಲು ಅನರ್ಹರು.(ಉ. ಡೈರಿ, ಮಹಾತ್ಮ ಲೆಟರ್ಸ್.ಪುಟ.180)(ಇನ್ನೂ ಕೆಲವೆಡೆ)

12. ಶುಲ್ಕ ಯಾವುದಾದರೂ ಸಲ್ಲಿಸಬೇಕೇ?

1. ಇನ್‌ಸಿಯೇಷನ್‌ಗೆ ಶುಲ್ಕ ಇಲ್ಲ.
2. ಸಬ್‌ಸ್ಕ್ರಿಪ್ಷನ್ ಇಲ್ಲ.
3. ಟ್ರೀಟ್‌ಮೆಂಟ್ ಉಚಿತವು. ಶುಲ್ಕವು ಇಲ್ಲ.

(ಎಲ್ಲಾ ವಿಧವಾದ ವ್ಯಾಧಿಗಳಿಗೂ, ಪ್ರಯೋಗಗಳಿಗೊ, ಭೂತಪ್ರೇತ ಪಿಶಾಚಿಗಳ ಬಾಧೆ ನಿವಾರಣೆಗಳಿಗೆ ಶುಲ್ಕ ಇಲ್ಲ).

13. ಈ ಯೋಗಕ್ಕೆ ರೂಲ್ಸ್ ಏನು?

12ವರ್ಷಗಳು ಮೇಲ್ಪಟ್ಟರಬೇಕು(ಟ್ರೀಟ್‌ಮೆಂಟ್‌ಗೆ ಇದು ಅನ್ವಯಿಸುವುದಿಲ್ಲ)

ತಾಯಿ ತಂದೆಯವರನ್ನು ಅವಲಂಬಿಸಿರುವವರಿಗೆ ಅವರ ಅನುಮತಿ (ಪರ್ಮಿಷನ್) ಅವಶ್ಯಕ.

ವಿವಾಹವಾದ ಸ್ತ್ರೀಯರು ಗಂಡನ ಅನುಮತಿಯನ್ನು ಪಡೆದು ಬರಬೇಕು. ಗಂಡ ಬಿಟ್ಟ ಸ್ತ್ರೀ ಅವನ ಜೊತೆ ಮತ್ತೆ ಸಂಸಾರಮಾಡಿ ಸುಖಸಂತೋಷಗಳಿಂದ ಇರಬೇಕೆಂಬ ಸತ್ಸಂಕಲ್ಪ ಇರುವ ಸ್ತ್ರೀ ಆದರೆ ಬಂದು ಪ್ರಾರ್ಥಿಸಬಹುದು.

ಮದುವೆಯಾಗದ ಸ್ತ್ರೀಯರಿಗೆ ತಾಯಿ ತಂದೆಯ ಪರ್ಮಿಷನ್ ಆಗಲಿ ಸಂರಕ್ಷಣೆ ಮಾಡುವವರ ಪರ್ಮಿಷನ್ ಆಗಲಿ ಆವಶ್ಯಕವು.

ಸಾಲತೀರಿಸದೇ ಇರಬಾರದು.

ಗೊಂದಲ ಚಿಂತೆಗಳು ಇಲ್ಲದೆ ಇರಬೇಕು(ಗೊಂದಲಗಳು ತೊಲಗಬೇಕೆಂದು ಪ್ರಾರ್ಥಿಸಬಹುದು).

ಪ್ರಶ್ನಾರ್ಥಕ ಸ್ವಭಾವದವರಾಗಿರಬಾರದು(Questionable Charecter).

(ಎ) 10ವರ್ಷಗಳು ಪ್ರಾಕ್ಟೀಸ್ ಮಾಡುವೆನೆಂಬ ನಿರ್ಣಯದಿಂದ ಬರಬೇಕು.

(ಬಿ) ಪ್ರಾಣಾಯಾಮ ಮಾಡಬಾರದು.

(ಸಿ) ಬೀಜಾಕ್ಷರಗಳು ಪಠಿಸಬಾರದು.

(ಡಿ) ಗಾಯತ್ರಿ ಮಂತ್ರ ಮಾಡಬಹುದು.

(ಇ) ಪೂಜೆ, ಮುಂತಾದವುಗಳು ಯಾವುದೂ ಮಾಡಬಾರದು.

(ಎಫ್) ಓಂ ಎಂಬುದನ್ನು ಉಚ್ಚರಿಸಬಾರದು. ಬೇರೇ ಮಂತ್ರಗಳನ್ನು ಜಪಿಸಬಾರದು.

(ಜಿ) ಬ್ರಹ್ಮ, ವಿಷ್ಣು, ಶಿವ ಅವರಿಗೆ ಸಂಬಂಧ ಕಲ್ಪಿಸಬಾರದು.

14. ಅಭಿವೃದ್ಧಿಯನ್ನು ತಿಳಿದುಕೊಳ್ಳುವುದು ಹೇಗೆ?

ನಿನ್ನ ಅಭಿವೃದ್ಧಿ ನೀನು ಬಯಸುವ ಬಯಕೆಗಳ ಮೇಲೇ ಆಧಾರ ವಾಗಿದೆ. ನೀನು 100 ಕೇಳಿದ್ದೀಯ, ಅದರಲ್ಲಿ 10 ಮಾತ್ರವೇ ಫಲಿಸಿದೆ ಅಂದರೆ 10% ಮಾತ್ರವೇ ಅಭಿವೃದ್ಧಿ ಹೊಂದಿದ ಹಾಗೆ, 100ಕ್ಕೆ 100ಪಾಲು ಅಭಿವೃದ್ಧಿ ಹೊಂದುವುದಕ್ಕೆ ಪ್ರಯತ್ನಿಸ ಬೇಕು, ಅಭಿವೃದ್ಧಿ ಹೊಂದಬೇಕು.

1. ನೀನು ಕ್ರಮಕ್ರಮವಾಗಿ ಅಭಿವೃದ್ಧಿ ಹೊಂದಿರುವೇ ಎಂಬ ವಿಷಯ ಹೇಗೆ ತಿಳಿಯುತ್ತದೆ, ಅಂದರೆ ನಿನ್ನ ಮನಸ್ಸಿಗೆ ಸೂಚಿಸಿದ್ದು ತಪ್ಪದಂತೆ ಕಾರ್ಯರೂಪ ಹೊಂದುವು ದರಿಂದ ನಿನ್ನ ಬುದ್ಧಿಯನ್ನು ಉಪಯೋಗಿಸಿ ನೀನು ಕೊಡುವ ಟ್ರೀಟ್‌ಮೆಂಟ್ ಫಲಿಸುವುದರ ಮೂಲಕ ನೀನು ಅಭಿವೃದ್ಧಿ ಹೊಂದುವುದನ್ನು ತಿಳಿಯಪಡಿಸುತ್ತದೆ.(ಮಹಾತ್ಮ ಲೆಟರ್ಸ್ ಸಂಪುಟ-1, ಪುಟ-251).
2. ನೀನು ಶಕ್ತಿಯನ್ನು ಸಂಪಾದಿಸಿ ವ್ಯಾಧಿಗಳಿಗೆ ಟ್ರೀಟ್‌ಮೆಂಟ್ ಕೊಟ್ಟರೆ ಅದು ಗುಣವಾಗುತ್ತದೆ. ಅದೇ ನೀನು ಅಭಿವೃದ್ಧಿಯನ್ನು ಹೊಂದಿರುವುದಕ್ಕೆ ಗುರುತು. ಆದ್ದರಿಂದ ಮುಂಚಿತವಾದ(ಪೂರ್ವಜನ್ಮ) ಕರ್ಮವ್ಯಾಧಿಗಳಿಗೆ ಟ್ರೀಟ್‌ಮೆಂಟ್ ಕೊಡುವುದು. ಅದುಯಾವಾಗ ಎಂದರೆ, ನೀನು ಸಂಪೂರ್ಣವಾದ ಶಕ್ತಿಯನ್ನು ಸಂಪಾದಿಸಿದಾಗ ಎಲ್ಲಾ ವ್ಯಾಧಿಗಳು ಕಡಿಮೆಯಾಗಿ ಹೋಗುತ್ತದೆ. ಇದು ನೀನು ಅಭಿವೃದ್ಧಿಯನ್ನು ಹೊಂದಿರುವುದಕ್ಕೆ ಗುರುತು.(ಮಹಾತ್ಮ ಲೆಟರ್ಸ್ ಸಂಪುಟ-262,263)

ನಾವು ಮಾಸ್ಟರ್ ಅವರ ದಯೆಯಿಂದ ಅಭಿವೃದ್ಧಿಯನ್ನು ಹೊಂದಿ 'ಹಿಂಟಿಂಗ್ ಬೋರ್ ಸೈಟ್(Hinting Bore Sight)'ನ್ನು ಸಂಪಾದಿಸಿ ಮೇಲ್ಮೇಲೆ ಅಭಿವೃದ್ಧಿಯನ್ನು ಹೊಂದಬಹುದು.

15. ಕೋರ್ಸುಗಳು, ರೆಗ್ಯುಲೇಷನ್ಸ್ ಒಲಿಡಿಯರ್-ಈಕ್ವಿನಾಕ್ಸ್, ಇನ್ನೂ ಬ್ರೀತಿಂಗ್ ಪ್ರಿನ್ಸಿಪಲ್ಸ್(Breathing Principles) ಈ ದಿನಗಳಲ್ಲಿ ಅವಶ್ಯವೇ?

ಮೇಲಿನದು ಯಾವುದೂ ಇಂದು ನಾವು ಮಾಡುವ ಅವಶ್ಯಕತೆ ಯಿಲ್ಲ. ಏಕೆಂದರೆ ಸೃಷ್ಟಿಕರ್ತ ಒಂದೊಂದು ಕೋರ್ಸ್ ಎಷ್ಟು ಪರ್ಯಾಯಗಳು 'ಕಾಸ್‌ವಾಸ್'ನಲ್ಲಿ ವೈಬ್ರೇಟ್(Vibrate) ಮಾಡು ಎಂದು ಆಜ್ಞಾಪಿಸಿದ್ದಾರೋ, ಆ ಆಜ್ಞೆಯ ಪ್ರಕಾರ ಮಾಸ್ಟರ್ ಸಿ.ವಿ.ವಿ. ಅವರು, ಅವರ ಮೀಡಿಯಂಗಳು ವೈಬ್ರೇಟ್ ಮಾಡಿದ್ದಾರೆ. ಈ ವಿಷಯವು ಮಾಸ್ಟರ್ ಅವರ ನೋಟ್ಸ್‌ನಲ್ಲಿ ಬರೆದಿದ್ದಾರೆ.

(1) ವರ್ಕಿಂಗ್(Working) ಪೂರ್ತಿಯಾಗಿದೆ. ಫಲಿತವನ್ನು ಪ್ರಕಟಿಸಲು ಸಮಯಕೋಸ್ಕರ ಕಾದಿದೆ. ಇದರಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ. (ನೋಟ್ಸ್ ವಾಲ್ಯೂಮ್-2, ಪುಟ-36 ತಾ.-7.11.1920)

(2) ಇನ್ನೊಂದು ಕಡೆ

(ಅ) ಪ್ರಾಕ್ಟೀಸ್‌ಗೆ ಕೊಟ್ಟಿದ್ದ ಹೆಸರು, ಕೊಡುವುದು ಪೂರ್ತಿ ಮಾಡಿದ್ದಾರೆ.

ಮಾಸ್ಟರ್ ಸಿ.ವಿ.ವಿ. ಮತ್ತು ಎಮ್.ಟಿ.ಎ.

(ಆ) ಮೀಡಿಯಂಗಳ ಮೂಲಕ ತಿಳಿದುಕೊಳ್ಳುವುದು.

(ಇ) ನೇರವಾಗಿ ತಿಳಿದುಕೊಳ್ಳುವುದು.

(ಆ),(ಇ) ಇನ್ನು ಮೇಲೆ ಕೆಲಸ ಮಾಡಬೇಕು.(ನೋಟ್ಸ್ ವಾಲ್ಯೂಮ್-4. ತಾ.11.2.1922)

ಆದ್ದರಿಂದ ಈ ದಿನಗಳಲ್ಲಿ ಮೇಲಿನದನ್ನು ಪುನರುಚ್ಚರಿಸುವ ಅವಶ್ಯಕತೆ ಇಲ್ಲ. ಮೇಲಿನ ವಿಷಯಗಳು ತಿಳಿಯದೇ ಮಾಡುತ್ತಿದ್ದಾರೆ. ಇತರರಿಂದ ಮಾಡಿಸುತ್ತಿದ್ದಾರೆ. ಇದು ಪುನಃ ಉಚ್ಚರಿಸುವುದರ ಮೂಲಕ ನಿಮಗೆ ಒದಗುವುದೇನು ಇಲ್ಲ.

ಮಾಸ್ಟರ್ ಅವರ ರೂಲ್ಸ್ ಪ್ರಕಾರ ನೀವು ಪ್ರಾರ್ಥನೆ ಮಾಡಬಯಸುವುದು 'ಮಾಸ್ಟರ್ ಸಿ.ವಿ.ವಿ.' ಮಾತ್ರವೇ, ಅದಕ್ಕೆ ಮುಂದೆ ಆಗಲಿ, ಹಿಂದೆ ಆಗಲಿ,ಯಾವ ವಿಧವಾದ ಹೆಸರುಗಳನ್ನು ಸೇರಿಸಬಾರದು.

ಈಕ್ವಿನಾಕ್ಸ್ ಪ್ರೇಯರ್ ಮಾಸ್ಟರ್ ಅವರು ಮಾಡಲಿಲ್ಲ. ಇತರರಿಗೆ ಕೊಡಲಿಲ್ಲ. ಅಕ್ರಮವಾಗಿ, ಅಜ್ಞಾನಿಗಳು ಕೆಲವರು ಮಾಡುತ್ತಿದ್ದಾರೆ, ಮಾಡಿಸುತ್ತಿದ್ದಾರೆ. ಮಾಸ್ಟರ್ ಅವರು ಏನೆಂದಿರುವರೆಂದರೆ ಅವರವರು ಇದಕ್ಕೆ ಹಿಂದಿನ ಜನ್ಮಗಳಲ್ಲಿ ಅಭಿವೃದ್ಧಿಯನ್ನು ಹೊಂದಿರುವುದಕ್ಕೆ ತಕ್ಕಂತೆ ಅವರ ಕ್ಲಾಸ್‌ಗಳ ಪ್ರಕಾರ ಕೋರ್ಸ್‌ಗಳನ್ನು ಕೊಟ್ಟು ಮೇಲ್ಮೇಲೆ ವೃದ್ಧಿ ಪಡಿಸಿದ್ದೇನೆ ಎಂದಿದ್ದಾರೆ.(ಡೈ.ಪು.373)

ನಾವು ಎಲ್ಲಿರುವೆವೋ ತಿಳಿಯದವರು ಕೋರ್ಸುಗಳು ಕೊಡುವುದರ ಮೂಲಕ ಈ ದಿನಗಳಲ್ಲಿ ಅವರಾಗಲಿ, ನಾವಾಗಲಿ ಸಾಧಿಸುವುದು ಏನೂ ಇಲ್ಲ..!

1) ಎಮ್.ಟಿ.ಎ., ಮಾಸ್ಟರ್ ಅವರಿಗೆ ಏನು ಹೇಳಿದೆ ಎಂದರೆ 'ನಿನ್ನ ವ್ಯಕ್ತಿಗತ ಅಭಿವೃದ್ಧಿಗೆ ಮಾಸ್ಟರ್ ಸಿ.ವಿ.ವಿ. ಎಂದು ಪ್ರಾರ್ಥಿಸುವುದು' ಎಂದು(ಉ.ಡೈರಿ ಪುಟ-50)

2) ಇನ್ನು ಮುಂದೆ ಮೀಡಿಯಂಗಳಿಗೆ ಪ್ರಾಕ್ಟೀಸ್‌ಗಾಗಿ ಕೊಡುವುದೇನೂ ಇಲ್ಲ, ಆದರೆ ಬೆಳಗ್ಗೆ ಸಾಯಂಕಾಲ ಸತ್ಯ ಪ್ರಕಟ ವಾಗುವ ವರೆಗೂ 'ಮಾಸ್ಟರ್ ಸಿ.ವಿ.ವಿ.' ಎಂದು ಪ್ರಾರ್ಥನೆ ಮಾಡುವುದು ಎಂದಿದ್ದಾರೆ.(ಎಮ್.ಟಿ.ಎ. ತಾ.30.11.1920)

3)8-5-1910 ರಿಂದ ಸಿ.ವಿ.ವಿ. ಅವರು ಜೀವಿಸಿರುವ ವರೆಗೂ ಎಲ್ಲಾ ಮೀಡಿಯಂಗಳಿಗೆ ಪ್ರಾರ್ಥನೆ 'ಮಾಸ್ಟರ್ ಸಿ.ವಿ.ವಿ. ನಮಸ್ಕಾರಂ' ಎಂದು ಕೊಟ್ಟಿದ್ದಾರೆ. ಸಿ.ವಿ.ವಿ. ಅವರು ಮೀಡಿಯಂ ಗಳಿಗೆ ಕೊಟ್ಟಿದ್ದ ಇನಿಸಿಯೇಷನ್ ಕಾರ್ಡನ್ನು ನೋಡಿರಿ.

16. ಮುಖ್ಯವಾದ ಸೂಚನೆಗಳು

1. ಈ ರೂಲ್ಸು ಎಲ್ಲಾ 10 ವರ್ಷಗಳು ಪ್ರಾರ್ಥನೆ ಮಾಡಿ, ಅಭಿವೃದ್ಧಿ ಹೊಂದಿ, ರೋಗಗಳನ್ನು ಹೋಗಲಾಡಿಸಿಕೊಂಡು 'ಎಟರ್ನಿಟಿ' ಹೊಂದ ಬೇಕೆಂದು ಕೊಳ್ಳುವವರಿಗೆ ಮಾತ್ರವೇ ಲಭಿಸುತ್ತದೆ. ಆತನು ಅಭಿವೃದ್ಧಿಯನ್ನು ಹೊಂದಿದರೆ ಇತರರ ವ್ಯಾಧಿಗಳನ್ನು ಹೋಗಲಾಡಿಸುವ ಶಕ್ತಿಯನ್ನು ಮಾಸ್ಟರ್ ಅವರು ಅವನಿಗೆ ಪ್ರಸಾದಿಸುತ್ತಾರೆ.
2. ಡಾಕ್ಟರ್ ಗಳಿಂದ ವಾಸಿಯಾಗದ ವ್ಯಾಧಿಗಳಿಂದ ನರಳುವವರು ಕೂಡ ಭಕ್ತಿ-ಶ್ರದ್ಧೆ ಗಳಿಂದ, ಅತ್ಯಂತ ವಿಶ್ವಾಸದಿಂದ, ಅತಿಜಾಗ್ರತೆಯಾಗಿ, ಪರಿಶುದ್ಧವಾದ ಮನಸ್ಸಿನಿಂದ ಪ್ರಾರ್ಥಿಸಿದವರಿಗೆ ಸಹ ಮಾಸ್ಟರ್ ಅವರು ಕೂಡಲೇ ರೋಗಗಳನ್ನು ಹೋಗಲಾಡಿಸುವರು.
3. ಇದಕ್ಕೆ ಮುಂಚೆ ಹೇಳಿದ, ಕುಡಿಯುವುದು ಮುಂತಾದ ಕೆಟ್ಟ ಗುಣಗಳಿರುವವರು ತಮ್ಮ ತಪ್ಪುಗಳನ್ನು ಕ್ಷಮಿಸಿ, ತಮಗೆ ಕೂಡ ಆರೋಗ್ಯವನ್ನು ಕೂಡಿರೆಂದು, ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡುವುದಿಲ್ಲ ಎಂದು ಬರೆದು ಸಹಿ ಹಾಕಿ, ಮಾಸ್ಟರ್ ಅವರ ಫೋಟೊ ಹಿಂದೆ ಆಗಲಿ, ಪಾದಗಳ ಮುಂದೆ ಆಗಲಿ ಇಟ್ಟು ಪ್ರಾರ್ಥಿಸುವುದು.

ಫೋಟೊ ಇಲ್ಲದಿದ್ದರೆ ಪ್ರಾರ್ಥನೆ ಮಾಡುವ ರೂಮಿನಲ್ಲಿ ಟೇಬಲ್ ಮೇಲೆ ನಾವು ಬರೆದ ಕಾಗದವನ್ನು ಇಟ್ಟು ಪ್ರಾರ್ಥಿಸಿದರೆ ಅವರನ್ನುಕೂಡ ಕ್ಷಮಿಸಿ ಮಾಸ್ಟರ್ ಅವರು, ವ್ಯಾಧಿಗಳು, ಕಷ್ಟಗಳನ್ನು ತೊಲಗಿಸುವರು (ಡೈರಿ ಯಿಂದ)

17. ವಾರ್ನಿಂಗ್

ಎಲ್ಲಾ ಯೋಗಸಾಧಕರು ಉದಾರಹೃದಯ ಉಳ್ಳವರಾಗಿ ಪ್ರೇಮ, ದಯೆ ವುಳ್ಳವರಾಗಿ, ಎಲ್ಲರೂ ಒಂದೇ ಅಭಿಪ್ರಾಯದಿಂದ ಇರಬೇಕು ಎಂದಿದ್ದಾರೆ. ಎಮ್.ಟಿ.ಎ.

ಈ ಯೋಗದಲ್ಲಿ 'ಥಾಟ್‌ಪವರ್'(Thought Power) ಅತಿ ಮುಖ್ಯ. ಇನ್ನು ಅಂತರಾತ್ಮ ಪರಿಶೀಲನೆ ಅದಕ್ಕಿಂತಲೂ ಮುಖ್ಯ. ಈ ಎರಡೂ ಇಲ್ಲದೆ ಪ್ರಾರ್ಥಿಸುವವರು ಏನೂ ಸಾಧಿ

ಸಲಾರರು.

ಅ. ನಿಮ್ಮಲ್ಲಿ ಹೆಪ್ಪು ಗಟ್ಟಿರುವ ತಪ್ಪು ಭಾವನೆಗಳನ್ನು ಹೊರದೂಡಿರಿ. ಮಾಸ್ಟರ್ ಅವರ ರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ ಪ್ರಾರ್ಥಿಸಿರಿ. ಎಂದರೆ ಏಕಾಗ್ರತೆ ಯಿಂದ ಅಂತರಾತ್ಮ ಪರಿಶೀಲನೆ ಮಾಡುತ್ತ ಪ್ರಾರ್ಥಿಸಿ ಅಭಿವೃದ್ಧಿಯನ್ನು ಹೊಂದಿ. ಮೃತ್ಯುವನ್ನು ಜಯಿಸಿರಿ.(ಎಮ್.ಟಿ.ಎ.)

ಆ. ಆಲೋಚಿಸಿರಿ, ನೀವು ಹೊರಸೂಸುವ ಪದಗಳೆಲ್ಲಾ ನಿಮಗೆ ಮತ್ತನ್ನು ಉಂಟುಮಾಡುತ್ತದೆ ಹೊರತು ಫಲಿತಾಂಶವನ್ನು ಕೊಡುವುದಿಲ್ಲ. (ಉ.ಡೈರಿ.ಪುಟ-435, ತಾ.20.6.1921).

ಇ. ಶಬ್ದಗಳಿಂದ ನೀವು ಸಂತೋಷಿಸ ಬಾರದು. ಆದರೇ ನೀವು ಶಾಶ್ವತತ್ವವನ್ನು ನಿರೂಪಿಸುವ ರೀತಿಯಲ್ಲಿ ಇರಬೇಕು.(ಡೈರಿ. ಪುಟ.441.ತಾ.20.11.1921).

ಈ. ಎಮ್.ಟಿ.ಎ. ಅವರ ಆದೇಶದ ಪ್ರಕಾರ, ಉಳಿದ ಶಬ್ದಗಳೆಲ್ಲವೂ ಹೊರಸೂಸಿ ಪೂರ್ಣಮಾಡಲ್ಪಟ್ಟಿದೆ.(ಉ.ಡೈ.ಪು.408 ತಾ.26.9.1920).

ಉ. ಶಬ್ದಗಳು ಹೊರಸೂಸುವ ಮೂಲಕ ನಿಮಗೆ ಏನೂ ಜರುಗುವುದಿಲ್ಲ. (ಒರಗುವುದಿಲ್ಲ). ಸಂತೊಷಿಸಬೇಡಿ.(ಎಮ್.ಟಿ.ಎ.)

ಕೂಡಲೆ ಕೋರ್ಸ್-ರೆಗ್ಯುಲೇಷನ್ಸ್ ಬಿಟ್ಟುಬಿಡಿ ಎಂದು ಕೋರುತ್ತಿದ್ದೇವೆ.

ಅಸಮರ್ಥರು, ಅಭಿವೃದ್ಧಿ ಹೊಂದದವರು, ಮಾಸ್ಟರ್ ಅವರ ರೂಲ್ಸ್- ರೆಗ್ಯುಲೇಷನ್ಸ್ ತಿಳಿಯದ ಅಹಂಕಾರಿಗಳ ಮಾತುಗಳಿಗೆ ಬೆಲೆ ಕೊಡಬೇಡಿ. ಅವರ ಮಾತು ಕೇಳಿದ್ದೇ ಆದರೆ ಯಾವವಿಧವಾದ ಅಭಿವೃದ್ಧಿಯನ್ನು ಹೊಂದಲಾರರು. ನಿಮಗೆ ಉಂಟಾದ ಕಷ್ಟಗಳನ್ನು, ರೋಗಗಳನ್ನು ಹೋಗಿಸಿ ಕೊಳ್ಳಲಾರಿರಿ. ನಿಮ್ಮ ಕಷ್ಟಗಳನ್ನು, ರೋಗಗಳನ್ನು ಹೋಗಲಾಡಿಸಿ ಕೊಳ್ಳದ ನೀವು ಇತರರ ಕಷ್ಟಗಳನ್ನು, ರೋಗಗಳನ್ನು ಹೇಗೆ ಹೋಗಲಾಡಿಸುವಿರಿ? ಮಾಸ್ಟರ್ ಅವರು ಹೇಳಿದಂತೆ, ಸಾವಿನಿಂದ ಹೇಗೆ ತಪ್ಪಿಸಿ ಕೊಳ್ಳುವಿರಿ?

ಅ. ಸೂಚನೆಗಳನ್ನೆಲ್ಲಾ ಸಿಹಿಯಾಗಿ ಕೇಳುವುದಕ್ಕೆ ಮಾತ್ರವೇ ಅಲ್ಲ. ಆಚರಿಸುವುದಕ್ಕೆ (ಮ.ಲೆ.ಪು.527)

ಆ. ಸೊಸೈಟಿ ರೂಲ್ಸ್-ರೆಗ್ಯುಲೇಷನ್ಸ್‌ಗೆ ವಿರುದ್ಧವಾಗಿ ಯಾರೂ ತಮ್ಮ ಸ್ವಂತ ಅಭಿಪ್ರಾಯಗಳನ್ನು ,ನನ್ನ ಯೋಗಕ್ಕೆ ಸೇರಿಸಬಾರದು. ಎಮ್.ಟಿ.ಎ. (ಮ.ಲೆ.ಪು. 635)

ಇ. ನನ್ನ ಯೋಗಕ್ಕೆ ನನ್ನ ಅಭಿಪ್ರಾಯಗಳು ಬೇಕೇ ಹೊರತು, ಆದರೆ ಇತರರ ಅಭಿಪ್ರಾಯಗಳು ನನಗೆ ಅವಶ್ಯಕವಿಲ್ಲ. (ಡೈ.ಪು.222)

ಈ. ಸಾಧಕರು ತಪ್ಪುದಾರಿ ಹಿಡಿಸುವುದಕ್ಕೆ ನಿನಗೆ, ನಾನು ಅಧಿಕಾರ ಕೊಡಲಿಲ್ಲ. ನಿನ್ನ ಅಭಿಪ್ರಾಯಗಳು ಹೇಳುವುದಕ್ಕೆ ನಿನಗೆ ಅಧಿಕಾರ ಕೊಡಲಿಲ್ಲ. ಎಮ್.ಟಿ.ಎ. (ಮ.ಲೆ.ಪು.264).

ಮೇಲಿನ ವಿಷಯಗಳೆಲ್ಲಾ 'ಮಾಸ್ಟರ್ ಸಿ.ವಿ.ವಿ.' ಅವರಿಗೆ ಎಮ್.ಟಿ.ಎ. ಅವರು ತಿಳಿಯ ಹೇಳಿದ್ದು, ಏನೂ ಬದಲಾವಣೆ ಮಾಡುವುದಕ್ಕಾಗಲಿ ಸಾಧಕರನ್ನು ತಪ್ಪುದಾರಿ ಹಿಡುಸುವು ದಕ್ಕಾಗಲಿ ಸಿ.ವಿ.ವಿ. ಅವರಿಗೆ ಅಧಿಕಾರವು ಇಲ್ಲವೆಂದು ಎಮ್.ಟಿ.ಎ. ತಿಳಿಸಿತು. ಮಾಸ್ಟರ್ ಸಿ.ವಿ.ವಿ. ಅವರ ಡೈರಿ ಗಳನ್ನು ನೋಡಿರಿ. ಅದರಲ್ಲಿ ಅವರ ಹತ್ತಿರ ಸೇರಿದ ಮೀಡಿಯಂ ಗಳೆಲ್ಲರಿಗೂ ಎಲ್ಲಾ ಕೋರ್ಸ್‌ಗಳು, ರೆಗ್ಯುಲೇಷನ್ಸ್‌ಗಳನ್ನು ಕೊಡಲಿಲ್ಲ. ಅವರವರು 'ಪೂರ್ವಜನ್ಮ ದಲ್ಲಿ ಹೊಂದಿದ ಅಭಿವೃದ್ಧಿಯನ್ನು ನೋಡಿ ಮೇಲ್ಮೇಲಿನ ಕೋರ್ಸ್‌ಗಳು, ರೆಗ್ಯುಲೇಷನ್ಸ್‌ಗಳನ್ನು ಕೊಟ್ಟು ಅಭಿವೃದ್ಧಿ ಪಡಿಸಿದ ಹಾಗೆ ತಿಳಿಯುತ್ತಿದೆ. 'ಪೂರ್ವಜನ್ಮದಲ್ಲಿ ಒಬ್ಬೊಬ್ಬರು ಕೆಲವು ಬಗೆಯ ಪಾಪಗಳನ್ನು ಮಾಡಿ ಈಜನ್ಮಕ್ಕೆ ಬಂದಿದ್ದಾರೆ. ಆದ್ದರಿಂದ ಎಲ್ಲರ ಶರೀರತತ್ವಗಳು ಒಂದೇ ರೀತಿ ಇರುವುದಿಲ್ಲ. ಆದ್ದರಿಂದ ಎಲ್ಲರಿಗೂ ಎಲ್ಲಾ ಕೋರ್ಸುಗಳನ್ನು ಕೊಡಲಿಲ್ಲ ಎಂದಿದ್ದಾರೆ.(ಉ. ಡೈ.ಪು.-11)

ಎಮ್.ಟಿ.ಎ. ರೂಲ್ಸ್-ರೆಗ್ಯುಲೇಷನ್ಸ್‌ಗಳು ತಿಳಿಯದೆ ಕೆಲವರು ಅಭಿವೃದ್ಧಿ ಹೊಂದದವರು ಕುರುಡಾಗಿ ನಮ್ಮ ಮಾಸ್ಟರ್ ಹೀಗೆ ಹೇಳಿದ್ದಾರೆ, ಎಂದು ಸಾಧಕರನ್ನು ತಪ್ಪುದಾರಿ ಹಿಡಿಸಿ, ಮಹಾಪಾತಕವನ್ನು ಕಟ್ಟಿಕೊಳ್ಳುತ್ತಿದ್ದಾರೆ.

ಇವರು ಮಾಸ್ಟರ್ಸ್ ಎಂದು ಯಾರನ್ನು ಹೇಳಿದ್ದಾರೋ ಅವರೇ ತಪ್ಪು ಮಾಡಿದ್ದಾರೆ ರೂಲ್ಸ್‌ಗಳನ್ನು ಮೀರಿದ್ದಾರೆ, ಪಾಪಗಳನ್ನು ಮೂಟೆ ಕಟ್ಟಿಕೊಂಡಿದ್ದಾರೆ.

ನೀವು ತಪ್ಪುದಾರಿ ಹಿಡಿಸುವವರ ಮಾತುಗಳು ಕೇಳಿ ಅವರು ಹೇಳಿದಂತೆ ಮಾಡಿದರೆ ಪಾಪಗಳು ಮೂಟೆ ಕಟ್ಟಿಕೊಳ್ಳುವಿರಿ. ಮೂಟೆ ಕಟ್ಟಿಕೊಂಡು ಪಾಪಗಳಿಂದ ಸಾಯುವಿರಿ, ಮತ್ತೆ ಹುಟ್ಟುವಿರಿ-ಸಾಯುವಿರಿ, ಅದರೆ ಎಟರ್ನಿಟಿಯನ್ನು ಸಂಪಾದಿಸಲಾಗದು, ಆಗದು, ಆಗದು. ಜಾಗ್ರತೆಯಾಗಿರಿ. ಈ ಯೋಗದಲ್ಲಿ 'ಮಾಸ್ಟರ್ ಎಂದರೆ ಸಿ.ವಿ.ವಿ. ಅವರು ಒಬ್ಬರೇ' ಎಂದು ಎಮ್.ಟಿ.ಎ. ಹೇಳಿದ್ದಾರೆ. ಎಷ್ಟು ಕೊಂಬು (ಸಾಮರ್ಥ್ಯ) ಇರುವವರು ಸಹಾ ಈ ಯೋಗದಲ್ಲಿ ಮಾಸ್ಟರ್ ಎಂದು ಹೇಳಿಕೊಳ್ಳುವು ದಕ್ಕೆ ಅರ್ಹತೆ ಇಲ್ಲ. ಅವರು ಸ್ಟೇಷನ್ ಮಾಸ್ಟರೋ, ಸ್ಕೂಲ್ ಮಾಸ್ಟರೋ ಮಾತ್ರವೇ ಆಗುತ್ತಾರೆ. ಕಟ್ಟಕಡೆಗೆ ಎಮ್.ಟಿ.ಎ. ಏನೆಂದು ನುಡಿದಿದ್ದಾರೋ ಕೇಳಿರಿ.

ನನ್ನ ರೋಲ್ಸ್-ರೆಗ್ಯುಲೇಷನ್ಸ್ ಪಾಲಿಸದೇ ಇರುವವರು ಕೂಡಲೆ ರಾಜೀನಾಮೆ ಕೊಟ್ಟು ಯೋಗಸ್ಕೂಲ್ ಬಿಟ್ಟು, ಅವರವರ ಮನೆಗಳಿಗೆ ತೆರಳಿರಿ ಎಂದು ತೀವ್ರವಾಗಿ ಎಚ್ಚರಿಸಿದ್ದಾರೆ(ಮ.ಲೆ.ಪು.551).

ಎಮ್.ಟಿ.ಎ. ರೂಲ್ಸ್-ರೆಗ್ಯುಲೇಷನ್ಸ್ ಗಳನ್ನು ತಿರಸ್ಕರಿಸುವುದಕ್ಕೆ ಮಾಸ್ಟರ್ ಸಿ.ವಿ.ವಿ. ಅವರಿಗೆ ಅಧಿಕಾರವು ಇಲ್ಲದೆ ಇರುವಾಗ, ಯಾರ ಗುರುಗಳಿಗೂ ಏನು ಅಧಿಕಾರವಿಲ್ಲ. ಇದೇ ಎಂದುಕೊಂಡರೆ ಅದು ದುರಹಂಕಾರ ವಾಗುವುದು.

ಕೋರ್ಸ್‌ಗಳು ಮುಂತಾದುವುಗಳನ್ನು ಮಾಡುವವರಿಗೆ ಲೈಫ್ ಗ್ಯಾರೆಂಟಿ ಸಸ್ಪೆಂಡ್ ಮಾಡಿದ್ದಾರೆ. ಮಹಾತ್ಮ(ಉ.ಡೈ.ಪು.)

ಮಾಸ್ಟರ್ ಅವರ ರೂಲ್ಸ್-ರೇಗ್ಯುಲೇಷನ್ಸ್ ಲೆಕ್ಕ ಮಾಡದೆ ನಿನ್ನ ಇಷ್ಟ ಪ್ರಕಾರ ಪ್ರಾರ್ಥನೆ ಮಾಡಿದರೆ ನಿನಗೆ ಎಟರ್ನಿಟಿ ಬರುವುದಿಲ್ಲ ಎಂದಿದ್ದಾರೆ. (ಡಿಸೊಬೀಡಿಯನ್ಸ್ ಕೆನಾಟ್ ಬಿ ಟಾಲರೇಟೆಡ್)

ಕಟ್ಟಕಡೆಗೆ ಪ್ರಶಾಂತವಾಗಿ ಆಲೋಚಿಸಿರಿ, ಬಾವಿಯಲ್ಲಿ ಕಪ್ಪಗಳ ಹಾಗೆ ಕೋರ್ಸ್ ಹೆಸರುಗಳನ್ನು ಕಿರಿಚುತ್ತಾ, ಜನ್ಮಗಳನ್ನೆತ್ತುತ್ತಾ, ಸಾಯುತ್ತಾ ನರಕದಲ್ಲಿ ಶಾಶ್ವತವಾಗಿ ಇರುತ್ತೀರೋ, ಮಾಸ್ಟರ್ ಅವರ ರೂಲ್ಸ್-ರೆಗ್ಯುಲೇಷನ್ಸ್ ಪ್ರಕಾರ 'ಮಾಸ್ಟರ್ ಸಿ.ವಿ.ವಿ. ನಮಸ್ಕಾರ' ಎಂದು ಪ್ರಾರ್ಥನೆ ಮಾಡಿ ಅಭಿವೃದ್ಧಿಯನ್ನು ಹೊಂದಿ ಮಾಸ್ಟರ್ ಅವರು ಆಶಿಸಿದ ಎಟರ್ನಿಟಿ ಮರುಜನ್ಮದಲ್ಲಲ್ಲದೆ ಈ ಜನ್ಮದಲ್ಲೇ ಈ ಶರೀರ ದೊಂದಿಗೆ ಸಂಪಾದಿಸಿ ಕೊಂಡು ಸುಖಸಂತೋಷಗಳಿಂದ ಜೀವಿಸುವರೋ ನಿರ್ಣಯಿಸಿಕೊಳ್ಳಿ.

18. ಮಾಸ್ಟರ್ ಸಿ.ವಿ.ವಿ. ಅವರ ಸಾಹಿತ್ಯವು(ಆಂಗ್ಲವು)

1. ಮಾಸ್ಟರ್ ನೋಟ್ಸ್ ಸಂಪುಟ.1	ರೂ.25.00
2. ಮಾಸ್ಟರ್ ನೋಟ್ಸ್ ಸಂಪುಟ.2	ರೂ.25.00
3. ಮಾಸ್ಟರ್ ನೋಟ್ಸ್ ಸಂಪುಟ.3	ರೂ.25.00
4. ಮಾಸ್ಟರ್ ನೋಟ್ಸ್ ಸಂಪುಟ.4	ರೂ.100.00
ದೊಡ್ಡ ಪೀಠಿಕೆ ಯಿಂದ	
5. ಪ್ಲಾನೆಟರಿ ಲೀಡಿಂಗ್ ನೋಟ್ಸ್	ರೂ.25.00
6. ಮಾಸ್ಟರ್ ಅವರ ಡೈರಿ	ರೂ.150.00
7. ಮಹಾತ್ಮ ಲೆಟರ್ಸ್ ಸಂ.1	ರೂ. 100.00
8. ಮಹಾತ್ಮ ಲೆಟರ್ಸ್ ಸಂ.2	ರೂ. 100.00
9. ಮಹಾತ್ಮ ಲೆಟರ್ಸ್ ಸಂ.3	ರೂ. 150.00
ತೆಲುಗು (ಶ್ರೀ ಶಾಸ್ತ್ರಿಅವರದು)	
1. ಪ್ರಜ್ಞಾಪ್ರಭಾಕರಮು	ರೂ. 20.00
2. ಪ್ರವಚನಾಲು	ರೂ. 20.00

ಸೀ.ಸಾ. ರಚನೆಗಳು

3. ಭೃಕ್ತ ರಹಿತ ತಾರಕ ರಾಜಯೋಗವು ರೂ.50.00
(ಪ್ರಶ್ನೆಮತ್ತುಉತ್ತರಗಳು)

19.ಕಾಪಿರೈಟ್ಸ್(ಹಕ್ಕುಗಳು)

20. ಇನ್ನೂ ಹೆಚ್ಚು ಮಾಹಿತಿ ಬೇಕಾದ್ದಲ್ಲಿ.

ಎ.ವಿ. ಶ್ರೀನಿವಾಸಾಚಾರ್ಯರು(ಸೀ.ಸಾ.)
ಮಾಸ್ಟರ್ ಸಿ.ವಿ.ವಿ. ಯೋಗ ಸೆಂಟರ್ ಬ್ರಾಂಚಿ
ಶ್ರೀ ಪ್ರಭಾಕರ ಮಿತ್ರ ಮಂಡಲಿ.
ನಂ.12, ರಾಮುಲವಾರಿ ಉತ್ತರ ಮಾಡಾ ವೀದಿ. ತಿರುಪತಿ – 517 507.
ಚಿತ್ತೂರು ಜಿಲ್ಲಾ – ಆಂಧ್ರಪ್ರದೇಶ್ – ಇಂಡಿಯಾ.
ಟೆಲಿಫೋನ್ ನಂ.:– +91 (0)877-222 8814.
ವೆಬ್‌ಸೈಟ್:-www.mastercvv.org.
ಇ-ಮೆಯಿಲ್:-avsacharyulu@rediffmail.com.



ಗುರುದೇವರು ಶ್ರೀ ವೇಟೂರಿ ಪ್ರಭಾಕರ ಶಾಸ್ತ್ರಿಯವರ ಘನತೆ ಏನು?

ನಮ್ಮ ಗುರುದೇವರಾದ ಶ್ರೀ ವೇಟೂರಿ ಪ್ರಭಾಕರ ಶಾಸ್ತ್ರಿಯವರು ಹುಟ್ಟಿದ್ದು ದಿನಾಂಕ **7-2-1888** ಮಂಗಳವಾರ ಮಧ್ಯಾಹ್ನ **12.10** ಜ್ಯೇಷ್ಟ ನಕ್ಷತ್ರ, ದಲ್ಲಿ ನಾಲ್ಕನೆಯ ಪಾದ ಪೆದ್ದಕಳ್ಳೇಪಲ್ಲಿ ಹಳ್ಳಿಯಲ್ಲಿ (ಕೃಷ್ಣಾ ಜಿಲ್ಲೆ, ಆಂಧ್ರಪ್ರದೇಶ್). ಇವರು ಅನೇಕ ವಿಧವಾದ ಖಾಯಿಲೆಗಳಿಂದ ನರಳುತ್ತಿದ್ದರು. ಅಂದು ಮದ್ರಾಸ್ ನಲ್ಲಿ ಪ್ರಸಿದ್ಧರಾದ ಆಂಗ್ಲ, ಆಯುರ್ವೇದ ವೈದ್ಯರ ಚಿಕಿತ್ಸೆ ಹೊಂದಿದ್ದಾರೆ. ಆದರೆ ಫಲಿತವು ಕಾಣಿಸಲಿಲ್ಲ. ಕಡೆಗೆ ಹೀಗೆ ನಿರ್ಣಯಿಸಿ ಕೊಂಡರು. ''ಮನೆಗೆ ಮತ್ತೆ ತೆರಳುವುದು ಬದುಕಿದ್ದೂ ಸತ್ತಂತೆ ಆಗುವುದು. ಕೈಯ್ಯಲ್ಲಿದ್ದ ಹಣದಿಂದ ಹರಿದ್ವಾರಕೆ ಟಿಕೆಟ್ಟು ತೆಗೆದು ಕೊಂಡು (ಟಿಕೆಟ್‌ಗೆ ಮಾತ್ರ ಹಣವಿದ್ದ ಕಾರಣ) ಮಾರ್ಗದಲ್ಲಿ ಉಪವಾಸವೇ ಮಾಡಿ, ಯಾವುದಾದರು ಆಹಾರ ಯಾರಿಂದ ಲಾದರೂ ಅಯಾಚಿತವಾಗಿ ಲಭಿಸಿದರೆ ತಿಂದು ಮಹಾಪ್ರಸ್ಥಾನ ಕಲ್ಪರೀತಿ ಹೋಗಿ ಗಂಗಾನದೀ ಪ್ರವಾಹದಲ್ಲಿ ಐಕ್ಯವಾಗುವುದೆಂದು ನಿಶ್ಚಯಿಸಿಕೊಂಡೆನು'' ಎಂದರು.

ಅಂತಹ ಸಮಯದಲ್ಲಿ ಒಂದುದಿನ ನಮ್ಮ ಗುರುದೇವರಾದ ಶ್ರೀ ಪೋತರಾಜು ನರಸಿಂಹಂ ಅವರು(ಮೀ.ನಂ.**123**. ಅವರು ಭೃಕ್ತ ರಹಿತ ತಾರಕ ರಾಜಯೋಗಕ್ಕೆ **30.1.1914** ರಲ್ಲಿ ಸೇರಿದರು). ಮದ್ರಾಸ್(ಚೆನ್ನೈ)ನಲ್ಲಿ ಅನಿರೀಕ್ಷಿತವಾಗಿ ಶಾಸ್ತ್ರಿಯವರ ನ್ನು ಭೇಟಿ ಮಾಡಿ ಅವರ ಅನಾರೋಗ್ಯವನ್ನು ತಿಳಿದುಕೊಂಡು ಕೂಡಲೆ ಶ್ರೀ ಮಾಸ್ಟರ್ ಸಿ.ವಿ.ವಿ. ಅವರಿಗೆ ಉತ್ತರವನ್ನು ಬರೆದು ಕೊಟ್ಟರು.

ಆ ದಿನ ಸಾಯಂಕಾಲ ಕುಂಭಕೋಣಂ ಪ್ರಯಾಣ.

ರೈಲಿನಲ್ಲಿ ಹೀಗೆ ಅನಿಸಿತ್ತು. ಹರಿದ್ವಾರ ಕ್ಕೆ ಬದಲು ಆರೋಗ್ಯದ್ವಾರ ಸೇರುತ್ತಿರುವೆ ನಂತಾದೆನು.

ಬೆಳಗ್ಗೆ ಮಾಸ್ಟರ್ ಸಿ.ವಿ.ವಿ. ಅವರನ್ನು ದರ್ಶಿಸಿದರು. ಸಿ.ವಿ.ವಿ. ಅವರನ್ನು ವರ್ಣಿಸಿದ ರೀತಿ ಇದು. **22.6.1916** ''ದಪ್ಪವಲ್ಲದೆ, ಸಣ್ಣವೂ ಅಲ್ಲದೆ, ಕುಳ್ಳಗಲ್ಲದೆ ಮತ್ತೆ ಉದ್ದವೂ ಅಲ್ಲದೆ ನಿಂಬೆಹಣ್ಣಿನ ವರ್ಣದಲ್ಲಿ ಅರುಣೋದಯ ಕಾಂತಿಗಳಿಂದ ಬೆಳಗುತ್ತಿದ್ದ ಮಾಸ್ಟರ್ ಅವರನ್ನು ನೋಡಿದ ಕೂಡಲೆ ನನ್ನದೇಹ ಪುಲಕರಿಸುತು. ಕೈಗಳನ್ನು ಜೋಡಿಸಿ ನಮಸ್ಕರಿಸಿ ಪತ್ರವನ್ನು ಅರ್ಪಿಸಿಕೊಂಡೆ, ಓದಿ, ನಕ್ಕು, ಸ್ನಾನಾಧಿಗಳನ್ನು ಮುಗಿಸಿ ವಿಶ್ರಾಂತಿಯನ್ನು ತೆಗೆದುಕೋ'' ಎಂದರು.

''ಮಾಸ್ಟರ್'' ಅವರಿಗೆ ನನ್ನ ಸ್ಥಿತಿಯನ್ನು ಭಿನ್ನವಿಸಲು ''ಇನ್ನು ನಿನ್ನ ಆರೋಗ್ಯ ರಕ್ಷಣೆಯ ಭಾರವನ್ನು ನಾನು ವಹಿಸುವೆನು. ಭಯಪಡದೆ ನಾಲ್ಕು ಜನರ ಜೊತೆ ಮಾಮೂಲಿಯಾದ ಭೋಜನವನ್ನು ಮಾಡಬಹುದು. ಅದರಿಂದ ನಿನಗೇನು ತೊಂದರೆಯಾಗದು'' ಎಂದರು. ಅಂದು ಸಾಯಂಕಾಲ 6ಗಂಟೆ ಗಳಿಗೆ ನನಗೆ 'ಮಾಸ್ಟರ್ ಅವರ' ಶಿಷ್ಯತಾನುಗ್ರಹ ಲಭಿಸಿತು.(ಯೋಗದಲ್ಲಿ ಸೇರಿದ ತಾರೀಖು **22.6.1916** ಮೀಡಿಯಂ ನಂಬರ್ **330**).

ಮಾಸ್ಟರ್ ಅವರಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ ನನ್ನ ಅಭ್ಯರ್ಥನೆಯನ್ನು ಭಿನ್ನವಿಸಿಕೊಂಡೆನು. ಉಪದೇಶವನ್ನು ಮಾಡಿದರು. ಕೂಡಲೆ 'ನೀನು ಹಾಲ್ ನೊಳಗೆ ಹೋಗಿ, ಶವಾಸನದಲ್ಲಿ ಮಲಗಿಕೊಂಡು ನಮಸ್ಕರಿಸಿ, ಉಪದಿಷ್ಟವನ್ನು ಒಂದುಬಾರಿ ಉಚ್ಚರಿಸಿ ಕಣ್ಣು ಮುಚ್ಚಿಕೊಂಡು ಶರೀರದ ಒಳಗೆ ಏನೇನು ಜರುಗುವುದೋ ಅದನ್ನು ಪರಿಶೀಲಿಸುತ್ತಿರು. ಮನಸ್ಸು ಬಹಿರ್ಮುಖವಾಗಿ ಎಲ್ಲಿಗಾದರೂ ಹೋದರೆ ಹೋಗಲಿ. ನೀನಾಗಿ ತಡೆ ಹಿಡಿಯಬೇಡ. ಅದೇ ತಿರುಗಿಬರುವುದು. ಏನು ಜರುಗುವುದೋ ಸಾಕ್ಷಿಭೂತವಾಗಿ ನೋಡಬೇಕೆಂದು ಭಾವಿಸು. ಅಷ್ಟೇ ನೀನು ಮಾಡಬೇಕಾದ್ದು. ಕೆಲವುನಿಮಿಷಗಳವರೆಗೆ ಕಣ್ಣುಗಳು ತೆಗೆಯಲು ಪ್ರಯತ್ನಿಸಬೇಡ, ಪ್ರಯತ್ನಿಸಿದರೂ ತೆಗೆಯಲಾಗುವುದಿಲ್ಲ. ಮತ್ತೆ ಮುಚ್ಚಿಕೊಂಡೆ ಹೋಗುವುದು, ಶರೀರದಲ್ಲಿ ಆಗ ಜರುಗ ಬೇಕಾದ್ದು ಜರುಗಿದಾಗ ಕಣ್ಣುಗಳು ತೆಗೆಯಲ್ಪಡುವುದು, ಆನಂತರ ಕಣ್ಣುಗಳು ಮುಚ್ಚಿಕೊಂಡು ಮಲಗುವುದು ಕಷ್ಟವೆನಿಸುವುದು' ಎಂದರು.

ಹಾಗೆಯೇ ಉಪದಿಷ್ಟವನ್ನು ಒಂದುಬಾರಿ ಸಾರ್ಥಕವಾಗಿ ಸ್ಮರಿಸಿ ಉಚ್ಚರಿಸಿ ಕಣ್ಣುಗಳು ಮುಚ್ಚಿಕೊಂಡು ಮಲಗಿಕೊಂಡೆ. ಕೂಡಲೆ ನನ್ನಲ್ಲಿ ಒಂದು ಮಹತ್ತರವಾದ ಪ್ರಜ್ಞೆ ಪ್ರವೇಶಿಸಿ ಕದಲಿಸುತ್ತಿರುವ ಹಾಗೆ ಗೋಚರಿಸಿ, ಉತ್ಸಾಹ, ವಿನೋದಗಳಿಂದ ಅದನ್ನೇ ಪರಿಶೀಲಿಸ ತೊಡಗಿದೆ. 'ಪ್ರಜ್ಞೆ' ಎಂದೋ, ಇನ್ನೇನೆಂದೊ, ನಿರ್ಧಾರಿಸಲಾಗದ ಅಪೂರ್ವಾನುಭೂತಿ ಪ್ರವೇಶಿಸಿ ನನ್ನಲ್ಲಿ ವಿಜೃಂಭಿಸಿತು. ಅದು ಎಲ್ಲಿ ಆರಂಭವಾಗಿರುವುದು, ಏನು ಜರಿಗಿಸುತ್ತಿದೆ, ಎಂದು ಹುಡಕಲಾರಂಭಿಸಿದೆ ಅದು ಶರೀರದ ಚರ್ಮದ ಒಳಗಿನ ವರೆಗೆ ವ್ಯಾಪಿಸಿದ ಹಾಗೆ ಮೊದಲು ಎಲ್ಲಿ ಉಪಕ್ರಮಿಸಿದೆಯೋ ಗುರ್ತಿಸಲಾಗದಂತಿತ್ತು. ಶರೀರದಲ್ಲಿ ಯಾವುದೋ ವಿಶಿಷ್ಟವಾದ ಹೊಸ ಇಂಜನ್ ಕೆಲಸಮಾಡು ವಂತಿತ್ತು. ನನ್ನ ಮನಸ್ಸು ಆನಂದೋತ್ಸಾಹಗಳಿಂದ ತುಂಬಿ ತುಳುಕಾಡುತ್ತಿತ್ತು. ನಾನು ಮಾಸ್ಟರ್ ಅವರ ಸನ್ನಿಧಿಗೆ ಹೋಗಿ ಜರುಗಿದ್ದೆಲ್ಲಾ ಹೇಳಿಕೊಂಡೆ. ಅವರು ಕಿರುನಗೆಯನ್ನು ಮೊಗದಲ್ಲಿ ಸೂಸಿ 'ತೃಪ್ತಿಯಾಗಿರು' ಎಂದು ಆದೇಶಿಸಿದರು. ಮರುದಿನ ಎದ್ದು ಕಾಲಕೃತ್ಯಗಳನ್ನು ತೀರಿಸಿಕೊಂಡು ಯೋಗಾನುಭೂತಿಗೆ ಸಿದ್ಧವಾಗಿದ್ದೆ. ಪೂರ್ವದಿನ ಸಾಯಂಕಾಲದಂದು ಆವೂರಿನವರು ಅನೇಕರು ಯೋಗಸಾಧನೆಗೆ ಬಂದಿದ್ದರು. ಅವರೆಲ್ಲಾ ಬೆಳಿಗ್ಗೆ ಸಹ ಬಂದಿದ್ದರು. ರಾಧಾಕೃಷ್ಣ ಪಿಳ್ಳೆ ಎಂದು ಮಹದೇವಯ್ಯರ್ ಎಂಬ ಇಬ್ಬರು ಪ್ರಧಾನ ಶಿಷ್ಯರಿದ್ದರು. ಅವರು ನನ್ನ ವಿಷಯವನ್ನು ಮಾಸ್ಟರ್ ಅವರಿಗೆ ಭಿನ್ನವಿಸಿದರು. ಆಗ ನನ್ನ ವಿಷಯವನ್ನು ಟೆಸ್ಟ್ ಮಾಡಬೇಕೆಂದು ಅವರು ಅವರಿಗೆ ಆಜ್ಞಾಪಿಸಿದರು. ಬೆಳಿಗ್ಗೆ ಸರಿಯಾಗ 9 ಘಂಟೆಗೆ 17 ನಿಮಿಷ ಗಳಿಗೆ ಬರೆಯಲಾರಂಭಿಸಿದರು. ಪಿಳ್ಳೆಯವರು ಕಣ್ಣು ಮುಚ್ಚಿಕೊಂಡಾಗ ಅಂತರ್ ದೃಷ್ಟಿಗೆ ಕಾಣಿಸಿದ್ದು, ಅಂತರ್ ಶೃತಿಗೆ ಕೇಳಿಸಿದ್ದು ಹೇಳ ತೊಡಗಿದರು. ಆಗ ನನ್ನ ಶರೀರಾಂತರ್ಭಾಗಗಳ ಸ್ವಾಸ್ಥ್ಯಾಸ್ವಾಸ್ಥ್ಯಗಳು, ನನ್ನ ಮನೋಭಾವನೆಗಳು, ನನ್ನ ಅನಾರೋಗ್ಯ ಕಾರಣಗಳು, ಅದರ ನಿವಾರಣೋಪಾಯಗಳು, ಅಲ್ಲಿಯ ವರಗೆ ಜರುಗಿದ ಪೂರ್ವಜನ್ಮಗಳು ಮುಂತಾದವುಗಳಿದ್ದವು. ಅದೆಲ್ಲಾ ಮುಗಿದ ನಂತರ ಅದನ್ನು ಮಾಸ್ಟರ್ ಅವರ ಬಳಿ ತೆಗೆದೊಯು ಕೇಳಿಸಿದರು. ಅವರ

ಅನುಮತಿ ಯಿಂದ ಅದನ್ನು ರಿಕಾರ್ಡ ಮಾಡಿದರು. ಆ ಕಾಲದಲ್ಲಿ ಯೋಗಾಭ್ಯಾಸಕ್ಕೆ ಬಂದು ಶಿಷ್ಯತೆಯನ್ನು ಹೊಂದುವವ ರೆಲ್ಲರಿಗೂ ಆ ರೀತಿಯ ಟೆಸ್ಟ್‌ನ್ನು ಮಾಡುವುದು ಜರುಗುತ್ತಿತ್ತು. ನನ್ನ ಕುರಿತು ಬಂದ ರೆಕಾರ್ಡ ಕಾಪಿಯನ್ನು ಕೋರಿದೆನು. ಮಾಸ್ಟರ್ ಅವರ ಅನುಮತಿ ಯಿಂದ ನನಗೆ ಕೊಟ್ಟರು. ಅದು ನನ್ನ ಬಳಿ ಇದೆ.

ಭೋಜನಾನಂತರ ನಾನು ತೆರಳಿ ಸಾಷ್ಟಾಂಗ ನಮಸ್ಕಾರಮಾಡಿ ಈ ರೀತಿ ಭಿನ್ನವಿಸುಕೊಂಡೆ. ''ಮೂರು ವರ್ಷಗಳಿಂದ ಯಮಬಾಧೆ ಪಡುತ್ತಿರುವೆನು. ನಿದ್ರೆ ಇಲ್ಲ. ಶಾಂತಿ ಇಲ್ಲ. ಹಸಿವು ಜೀರ್ಣಿಸಿ ಕೊಳ್ಳುವ ಶಕ್ತಿ ಸರಿಯಾಗಿಲ್ಲ. ಇಲ್ಲಿಗೆ ಬರುವೆ ಎಂದು ಯೋಚನೆ ಬರುವ ಮುಂಚೆಯೇ ನನಗೆ ಗೊತ್ತಿಲ್ಲದಯೇ ಸರಿಯಾಗಿ ಭೋಜನ ಮಾಡಿದೆನು.

ನಿಮ್ಮ ಯೋಗದ ಮಹತ್ವವು ಶ್ರೀ ನರಸಿಂಹಂ ಅವರ ಮೂಲಕ ಕೇಳಿದ ಕೂಡಲೆ ನನ್ನಲ್ಲಿ ಯಾವುದೋ ದಿವ್ಯಸೌಖ್ಯಸೌಧಕ್ಕೆ ದಾರಿ ಗೋಚರಿಸಿದ ಹಾಗೆ ಆಯಿತು. ಪ್ರಶಾಂತವಾಗಿ ಬರುವಂತಾದೆನು. ಮೊದಲು ತೀವ್ರವಾದ ಔಷಧಿಗಳನ್ನು ತೆಗೆದುಕೊಂಡೆ. ಅಂದಿನಿಂದ ಹೊಟ್ಟೆಯಲ್ಲಿ ಸುಡುವ ಯಾತನೆ ಯಾಗುತ್ತಿತ್ತು. ಇಂದು ಅದಿಲ್ಲ. ನಾನು ಇಲ್ಲಿ ನಿಮ್ಮ ಸೇವಕನಾಗಿಯೇ ಇರಬೇಕೆಂದಿದ್ದೇನೆ'. ಅವರು, 'ನಿನಗೀಗ ಸಂಭಳ ಎಷ್ಟು?' ಎಂದು ಕೇಳಿದರು. 'ಐವತ್ತು ರೂಪಾಯಿ' ಎಂದೆ. 'ಇದ್ದರಿಂದ ನೀನು, ನಿನ್ನ ಕುಟುಂಬವನ್ನು ಪೋಷಿಸಬಹುದು. ಇರುವ ಉದ್ಯೋಗವನ್ನು ಬಿಟ್ಟು ಇಲ್ಲಿರಲು ಬಯಸುವೆ ಏಕೆ?

ಬಂಡಿ ನಡೆಯುತ್ತಿರುವಾಗಲೇ ರಿಪೇರಿಯಾಗಬೇಕು, ಬಂಡಿ ಭಾಗವನ್ನು ತೆಗೆದು ಹಾಕಿದರೆ ಬಂಡಿಯವನ ಜೀವನ ಕೆಡುವುದು, ಅಂತಹುದು ನನ್ನ ಯೋಗಮಾರ್ಗ. ಸಾಗುತ್ತಿರುವ ಪ್ರವೃತ್ತಿಗೆ ಭಂಗವಾಗಬಾರದು. ಇದು ನಿವೃತ್ತಿ ಮಾರ್ಗವಲ್ಲ. ರಾಜಯೋಗ ಮಾರ್ಗವು, ಗೃಹಸ್ಥನಾಗಿರಬೇಕು. ಸನ್ಯಾಸಿ ಯಾಗಬಾರದು. ಸೌಖ್ಯವಿರಬೇಕು. ಆಹಾರಾದಿಗಳು ಸರಿಯಾಗಿ, ಸಂತೃಪ್ತಿಯಾಗಿ ಸೇವಿಸಬೇಕು. ಹಾಗೆಯೇ ನೀನು ಉದ್ಯೋಗದಲ್ಲಿರುವುದು ಅವಶ್ಯಕವು. ಈ ಉದ್ಯೋಗವು ನಿನ್ನ ಜೀವನಕ್ಕೆ ಮಾತ್ರವಲ್ಲದೆ, ಲೋಕಕ್ಕೂ ಸಹಾ ಉಪಕಾರವು. ನೀನು ಇಲ್ಲಿರುವ ಬಯಸುವುದು ನನ್ನ ಸನ್ನಿಧಿಯ ಲಾಭಕ್ಕೋಸ್ಕರ ಅಲ್ಲವೇ! ನಾನು ಸದಾ ನಿನ್ನಲ್ಲಿರುವೆನು ನಿನಗೆ ಬೇಕಾದ ಸಹಾಯವನ್ನು ನಿನ್ನಲ್ಲಿ ಜರುಗಿಸುತ್ತಲೇ ಇರುವೆನು. ಇಲ್ಲಿ ನಿನ್ನ ಶರೀರದಲ್ಲಿ ಯಾವ ರೀತಿಯ ಸಂಸ್ಕಾರ ಜರುಗುವುದು ನೆನಪಿಗೆ ಬರುವುದೋ, ಅದೇರೀತಿ ಎಲ್ಲಿದ್ದರೂ ಅನುಭೂತಿ ನೆನಪಿಗೆ ಬರುವುದು. ಬೆಳಿಗ್ಗೆ ನಡೆಸಿದ ಯೋಗಸಾಧನೆ ಶರೀರದಲ್ಲಿ ಸಾಯಂಕಾಲದ ವರೆಗೆ ಕೆಲಸ ಮಾಡುತ್ತಲೇ ಇರುವುದು. ಯಾವಾಗ ಎಷ್ಟೆಷ್ಟು ಜರುಗಬೇಕೋ ಅಷ್ಟಷ್ಟು ಜರುಗುವುದು. ನಿನ್ನಲ್ಲಿರುವ ಸಂಸ್ಕಾರ ಜರುಗಿಸುವುದು ಪ್ರಜ್ಞಾಕಲಿತವಾದ ಚೈತನ್ಯವು. ಜಡಶಕ್ತಿ ಅಲ್ಲ. ಅದು ಎಲಕ್ಟ್ರಿಸಿಟಿಯಂತೆ ಕೆಲಸಮಾಡುವುದು ಅಲ್ಲ. ಎಲಕ್ಟ್ರಿಸಿಟಿ ಹದ್ದುಮೀರಿ ಅಕ್ರಮವಾಗಿ ಉಪಯೋಗಿಸಿದರೆ ಕೇಡಾಗುವುದು. ನಿನ್ನಲ್ಲಿ ಈಗ ಹೊಸದಾಗಿ ಪ್ರವೇಶಿಸಿದ ಪ್ರಜ್ಞೆ ನೀನು ಅಧಿಕವಾಗಿ ಉಪಯೋಗ ಬಯಸಿದರೂ ಅದು ಹಾಗೆ ಕೆಲಸ ಮಾಡುವುದಿಲ್ಲ. ಎಷ್ಟುಮಾಡಬೇಕೋ

ಅಷ್ಟು ಮಾಡುವುದು, ಬೇಕೆಂದರೂ ನಿನಗಾವಶ್ಯಕತೆಗೆ ಮೀರಿ ಕಣ್ಣು ಮುಚ್ಚಿಕೊಂಡಿರಲಾರೆ. ಒಳಗೆ ಅವಶ್ಯಕತೆಯಾದ ಕೆಲಸ ಜರುಗುತ್ತಿರುವಾಗ ಕಣ್ಣು ಬಿಡಲೂ ಆಗದು.

ಪ್ರಯಾಣಗಳಲ್ಲಿ, ರೈಲಿನಲ್ಲಿ, ಬಂಡಿಯಲ್ಲಿ, ನಡೆಯುವಾಗ, ಇನ್ನೇನಾದರು ವ್ಯವಹಾರಗಳಲ್ಲಿ ವ್ಯವಹರಿಸುವ ಸಮಯದಲ್ಲಿ ಸರಿಯಾದ ವೇಳೆ ತಪ್ಪದೆ, ಒಂದು ಕ್ಷಣಮಾತ್ರ ಮನಸ್ಸಿನಲ್ಲಿ ಸ್ಮರಿಸಿದರೆ ಸಾಕು, ಕಾರ್ಯಾಂತರಗಳೆಲ್ಲಾ ಮುಗಿದು ವಿರಾಮ ಸಿಕ್ಕಿದಾಗ ಜರುಗಬೇಕಾದ ಸಾಧನೆ ಎಲ್ಲಾ ಜರುಗುವುದು.

"ವಿವೇಕವನ್ನು, ಸತ್ಯವನ್ನು, ಧರ್ಮವನ್ನು ಗುರ್ತಿಸಿಕೊಂಡು ಅಂತರಾತ್ಮವನ್ನು ಆರಾಧಿಸುತ್ತ ಒಳಗೊಳಗೇ ಹೋಗುವಾಗ ನಿನಗೆ ಬೇಕಾದ ಉಧ್ಬೋಧಗಳು ಲಭಿಸುವುದು. ಅಂತಹ ಉಧ್ಬೋಧಗಳನ್ನು ನೀನು ನಿನ್ನಲ್ಲಿ, ಎಲ್ಲಿಂದ ಹೇಗೆ ಪಡಯುತ್ತಿರುವೆಯೋ, ಕ್ರಮಕ್ರಮವಾಗಿ ತಿಳಿದುಕೊಳ್ಳ ಬಲ್ಲೆ, ಮೊದಲು ನಿನ್ನ ದೃಷ್ಟಿ ಆರೋಗ್ಯ ಲಾಭದ ಕಡೆಗೆ ಇದೆ. ನೀನು ಪರಮಾರ್ಥ ಕುತೂಹಲಿಯಾಗಿದ್ದರೆ ಸಾಕು. ಯೋಗಸಾಧನೆಯನ್ನು ಹಸಿದ ಖಾಲಿ ಹೊಟ್ಟೆಯಲ್ಲಿ ಮಾಡಬಾರದು. ಏನಾದರು ಆಹಾರವನ್ನು ಸೇವಿಸಿ ಮಾಡಬೇಕು."

ಕೆಲವು ದಿನಗಳನಂತರ ಮತ್ತೆ ಕುಂಭಕೋಣಂಗೆ ಹೋಗಿದ್ದಾಗ ಶ್ರೀಅವರು(ಮಾಸ್ಟರ್ ಅವರು) ನಾನು ಕೇಳದಯೇ ವಿಷಯವನ್ನು ಕುರಿತು ಹೀಗೆಂದರು ನನಗೆ ಶಿಷ್ಯರಾಗಿರುವವರು ಯಾರೇ ಆಗಲಿ ಲೋಕಕ್ಕೆ ವಿರುದ್ದವಾಗಿ ತೋಚುವ ವೇಷ, ಭಾಷಗಳಿಂದ ಇರುವುದು ಸರಿಯಿಲ್ಲ. ನಾಲ್ಕು ಜನರಂತಯೇ ಇರಬೇಕು. ಈ ಯೋಗದಲ್ಲಿ ಯಾರೇ ಆಗಲಿ ಪ್ರತ್ಯೇಕವಾಗಿ ಗುರಿಯನ್ನು ಸಾಧಿಸಲಾರ. ತಾನು ತನ್ನ ಸುತ್ತಮುತ್ತಲಿರುವವರು, ತನ್ನ ಆಪ್ತರು ಎಂದು ಕ್ರಮವಾಗಿ ಪ್ರೇಮ ವ್ಯಾಪಕ ವಾಗುವ ರೀತಿ ಅನುಸರಿಸಿ, ತಾನು ತನ್ನ ಸುತ್ತಮುತ್ತಲಿರುವವರು, ತನ್ನ ಆಪ್ತರು ಎಂದು ಕ್ರಮವಾಗಿ ಲೋಕವನ್ನೆಲ್ಲಾ ಪ್ರೇಮಿಸಿ ಲೋಕವನ್ನೆಲ್ಲಾ ಗುರಿ ತಲುಪುವಂತಹವನು(ಉದ್ಧರಿಸುಹಂತಹವನು) ಆಗಬೇಕು. ತನ್ನ ಪ್ರೇಮ ಸರ್ವಲೋಕವ್ಯಾಪಕ ವಾಗದವರೆಗೆ ಯಾರೇ ಆಗಲಿ ಗುರಿ ಮುಟ್ಟಲಾರನು. ಅಖಂಡವು, ಸರ್ವವ್ಯಾಪಕವಾದ ತತ್ವವನ್ನು ಹೊಂದುವುದಕ್ಕೆ ತಾನು ಅಖಂಡನು, ಸರ್ವವ್ಯಾಪಕನು ಆಗದೇ ತಪ್ಪದು. ದೇಶ, ಕುಲ, ಜಾತಿ, ಮತಾದಿ ಪರಿಚ್ಛೇದ ಗಳಿಂದ ಬೇರೆ ಆಗಿಹೋಗಿ ಸರ್ವ ಪ್ರಜೆಯ ಸಾಮರಸ್ಯ ಹೊಂದಿಸಿ ಕೊಳ್ಳದವನು ಸಂಸಾರ ಬಂಧನದಲ್ಲಿ ಸಿಲುಕಿ ಹೋಗುವವನೇ! ಬಹಿರ್ಮುಖವಾಗಿ ಸಾಗುತ್ತಿದ್ದ ಬಹುತ್ವವನು ಸಾಗಿಸುತ್ತಲೇ ಅಂತರ್ಮುಖವಾಗಿ ತಿರುಗಿ, ಅದರಲ್ಲಿ ಏಕತ್ವವನ್ನು ಗುರ್ತಿಸಿ ವರ್ತಿಸುವುದು ಈ ಯೋಗಸಾಧನೆಗೊಂದು ಫಲವು, ನಮ್ಮ ಪರಿಪೂರ್ಣತೆ ಭವಿಷ್ಯದಲ್ಲಿ ಇರುವುದು. ಆದರೆ ಭೂತದಲ್ಲಲ್ಲ. ಆದ್ದರಿಂದ ಭೂತವೆಂಬ ಪೀಠಿಕೆ ಸ್ಥಾಪಿಸಿ ಭವಿಷ್ಯತ್ತಿನಲ್ಲಿ ಪರಮಾರ್ಥವನ್ನು ಅನುಭವಿಸಬೇಕಾಗಿದೆ'.

ಅನಂತರ ಸಮಯಾಂತರದಲ್ಲಿ ಹೀಗೆ ಹೇಳಿದ್ದಾರೆ"ನಿಮಗಾವುದಾದರೂ

ಸಂದೇಹಗಳುಂಟಾದರೆ, ಉಂಟಾದುದಕ್ಕೆ ಉತ್ತರವನ್ನು ಯೋಚಿಸದೆ, ಕೂಡಲೆ ಅವುಗಳನ್ನು ಹಾಗೆಯೇ ನನಗೆ ಬರೆಯುವುದೋ, ಕೇಳವುದೋ ಮಾಡಬೇಡಿ. ನಿಮಗಾದಷ್ಟು ಅದರ ಉತ್ತರವನ್ನು ನೀವೇ ಕಂಡುಕೊಳ್ಳಲು ಪ್ರಯತ್ನಿಸಿ. ಇಷ್ಟಕ್ಕೂ ಸಮಾಧಾನ ಸಿಗದೇ ಇರುವುದನ್ನು ನನ್ನನ್ನು ಕೇಳಿ. ನ್ಯಾಯವಾದ, ಸಮುಚಿದವಾದ ಪ್ರಶ್ನೆ ಯಾರಿಗಾದರೂ ತೋಚಿದರೆ, ಆ ಪ್ರಶ್ನೆಯ ಘನತೆಯನ್ನು ಅನುಸರಿಸಿ ಅದಕ್ಕೆ ತಕ್ಕಷ್ಟು ಯತ್ನವು ಮಾಡಿದರೆ ಸರಿಯಾವ ಉತ್ತರವು ಸಿಗಬಲ್ಲದು. ಆ ಯತ್ನವು ಬಹಿರ್ಮುಖವಾಗಿ ಬರೆದ ಪ್ರಾಚೀನ ಗ್ರಂಥಾದಿಗಳಿಂದ, ತನಗೆ ಜ್ಞಾನಿಗಳಾಗಿ ತೋರುವ ಆಪ್ತರಿಂದ ತಿಳಿಯಲ್ಪಡುವುದು. ಅಂತರ್ಮುಖವಾಗಿದ್ದರೆ ಆತ್ಮೋದ್ಬೋಧಕ ರೂಪಕವಾಗುವುದು. ಈ ಯೋಗ ಅಂತಹ ಆತ್ಮೋದ್ಬೋದವನ್ನು ಕೊಡುವುದಕ್ಕೆ.

ಬಹಿರ್ಮುಖವಾಗಿ ಸಮಾಧಾನ ತಿಳಿಯಬೇಕಾದರೆ, ‘‘ಅನಂತ ಶಾಸ್ತ್ರಂ ಬಹುವೇದಿತವ್ಯಂ’’ ಆಯಾ ಶಾಸ್ತ್ರಗಳನ್ನು, ತತ್‌ಕರ್ತರು ಬಹುಬೇದದವರು, ಅದರಲ್ಲಿಯಾರದ್ದು ಸ್ವೀಕರಿಸಬೇಕೋ ನಿರ್ಧರಿಸುವುದು ಮತ್ತೆ ಆತ್ಮೋದ್ಬೋದವೇ, ‘‘ಘಟ್ಟಕುಟೀ ಪ್ರಭಾತನ್ಯಾಯದ’’ ರೀತಿ ಎಲ್ಲರೂ ಅದೇರೀತಿಯ ಆತ್ಮೋದ್ಬೋದವನ್ನು ಅನುಸರಿಸ ಬೇಕಾದವರೆ. ಅನುಸರಿಸುವವರಾಗದೇ ತಪ್ಪದು ಬಹಿರ್ಮುಖವಾಗಿ ಲಭಿಸುವ ವಿಜ್ಞಾನವನ್ನು ಜೊತೆ ಗೂಡಿಸಿಕೊಂಡು ಆತ್ಮೋದ್ಬೋದಗಳನ್ನು ಪ್ರಾಪ್ತಿಸಿಕೊಂಡಾಗ ಪರಮಾರ್ಥವನ್ನು ಸುಲಭವಾಗಿ ಪಡೆಯಲಾಗುವುದು ಎಂದಿದ್ದಾರೆ. ಯೋಗ ಸಾಧನೆಯ ನಂತರ ರಾಮಜಪದಹಾಗೆ ಕೆಲವು ಸಮಯ ತದೇಕಾನುಧ್ಯಾನ ಮಾಡಿದೆನು. ದೇಹವೆಲ್ಲ ಉರಿಯಾದಂತಾಯಿತು. ಅದನ್ನು ಶ್ರೀಅವರಿಗೆ ಹೇಳಿದೆನು. ‘‘ನಿಯತಸಮಯದಲ್ಲಲ್ಲದೆ ಇತರ ಸಮಯದಲ್ಲಿ ನನ್ನ ಅನುಷ್ಠಾನ ಮಾಡಬಾರದೆಂದು, ಯಾವುದಾದರೂ ಅವಶ್ಯಕತೆ ಉಂಟಾದರೆ ಆಗ ಒಂದು ಕ್ಷಣ ಸ್ಮರಿಸಿದ ಮಾತ್ರಕ್ಕೆ ಜರುಗ ಬೇಕಾದ ಸೌಕರ್ಯ ಜರುಗುವುದೆಂದು, ತದೇಕ ಪಾರಾಯಣಮಾಡುವುದಕ್ಕೆ ಪರತತ್ವವು ಕಿವುಡಲ್ಲವೆಂದು, ಬಾಯಿಮಾತನ್ನು ಕಿವಿ ಕೇಳುವಹಾಗೆ ನಿಮ್ಮ ಮನವಿಯನ್ನು ಅದು ಕೇಳವುದೆಂದು ಒಂದುಬಾರಿ ಪ್ರಾರ್ಥಿಸಿದ ಮಾತ್ರಕ್ಕೆ ಸರ್ವಸಿದ್ಧವಾಗಿ ಅನುಗ್ರಹಿಸುತ್ತಿದ್ದರೆ, ಅದು ನೋಡುತ್ತಿದಂತೆಯೇ ಮತ್ತೆ ಮತ್ತೆ ಕೇಳುವುದೇಕೆ’’ ಎಂದು ಅಂದರು ‘‘ಟೆಲಿಫೋನ್ ನಲ್ಲಿ ಒಂದುಬಾರಿ ಕೊಗಿದರೆ ಆಚೆಯವರು ಸಿದ್ಧವಾಗಿ ಉತ್ತರ ಕೊಡುತ್ತಿದ್ದರೆ ಅದನ್ನು ಕೇಳದೆ ಸುಮ್ಮನೆ ಕೂಗುವವನ ರೀತಿ ಅನೇಕಬಾರಿ ಸ್ಮರಿಸುವರೀತಿ’’ ಎಂದುರು.

1925 ವರ್ಷದ ಪ್ರಾಂತದಲ್ಲಿ ಒಬ್ಬ ಮಿತ್ರನು ನಿರಂತರವೂ ಶ್ರೀಅವರ ಸ್ಮರಣೆಯನ್ನು ರಾಮಜಪದಹಾಗೆ ನುಡಿಸಿದನು, ಕೆಲವು ದಿನಗಳಿಗೆ ಶರೀರವೆಲ್ಲಾ ಅಗ್ನಿಜ್ವಾಲೆಯ ಹಾಗಿ ಆಯಿತು.

ಮಾಡಿದ ತಪ್ಪಿಗೆ ಪಶ್ಚಾತ್ತಾಪವನ್ನು ಹೊಂದಿ ‘‘ಕ್ಷಮಿಸಿ’’ ಎಂದು ಪ್ರಾರ್ಥಿಸಿ ಸಕ್ರಮವಾಗಿ ನಡೆದುಕೊಂಡ ಮೇಲೆ ಗುಣವಾಯಿತು.

ಮನೆಗೆ ಬಂದ ವಾರದಲ್ಲೇ ನನಗೆ ಆಫೀಸಿನಿಂದ ಟೆಲಿಗ್ರಾಮ್ ಬಂದಿತು ‘‘ತಕ್ಷಣವೇ ನೀನು

ತಂಜಾವೂರು ಲೈಬ್ರರಿ ಪರಿಶೀಲನೆಗೆ ಹೊರಡಬೇಕು, ಅಲ್ಲಿಸೇರಿ ಕೆಲಸ ಮಾಡುವುದು'' ಎಂದು. ಮದ್ರಾಸ್ ಬಂದು ಆಫೀಸ್‌ಗೆ ಹೋಗಿ ಮದ್ರಾಸ್‌ನಲ್ಲಿ ನಿಲ್ಲದೆ ಕುಂಭಕೋಣಂಗೆ ಹೊರಟುಹೋದೆ.

ಶ್ರೀಅವರು ನನ್ನನ್ನು ಪ್ರತಿ ವಾರವು, ರಜಾದಿನಗಳಲ್ಲಿ ತಂಜಾವೂರಿನಿಂದ ಕುಂಭಕೋಣಂಗೆ ಬರಹೇಳಿದರು.

ಆ ಕಾಲದಲ್ಲಿ ರೈಲುಚಾರ್ಜ್ ಅರ್ಧ ರೂಪಾಯಿ ಒಳಗೆ ಇತ್ತುಹಾಗೆ ಮಾಡುತ್ತಿದ್ದೆನು.

1916 ಕ್ರಿಸ್‌ಮಸ್ ರಜೆಗಳು ಬಂದಿತ್ತು. ನಾನು ಆ ರಜಾ ದಿನಗಳಲ್ಲಿ ಶ್ರೀಅವರ ಸನ್ನಿಧಿಯಲ್ಲಿದ್ದೆ 31.12.1916ರಂದು ಬೇದಿಯಾಗಿ, ಸುಸ್ತಾಗಿತ್ತು. ಶ್ರೀಅವರಿಗೆ ಈ ಅಸಂದರ್ಭವು ತಿಳಿಯಿತು. ರಾಮಚಂದ್ರಯ್ಯರ್ ಅವರು ಎಂಬ ಮುಖ್ಯಶಿಷ್ಯನನ್ನು ಕರೆದು ''ಪ್ರಭಾಕರನಿಗೆ ವಿಗರ್ ಸಪ್ಲೈ ಆಗುವ ಹಾಗಿ ಟ್ರೀಟ್ ಮಾಡು'' ಎಂದರು. ಆತನು ಮಲಗಿದ್ದವರು ನನ್ನ ಹತ್ತಿರ ಬಂದು ಹಾಗೇ ಮಾಡಿದರು. ಐದು ನಿಮಿಷಗಳಲ್ಲಿ ಮಲಗಿದ್ದ ನಾನು ಎದ್ದು ಕೂತು, ಕೂತ ನಾನು ಎದ್ದು ಎದ್ದಮೇಲೆ ಆಕಡೆ ಈಕಡೆ ತಿರುಗಿ, ತಿರುಗಿದ ನಾನು ಓಡಡುವಹಾಗೆ ಉತ್ಸಾಹ ಶಕ್ತಿಪೂರಿತನಾದೆ. ಶ್ರೀಅವರಪಾದಗಳಿಗೆ ಎರಗಿದೆ.

''ರೈಲಿಗೆ ಸಮಯವಾಗುತ್ತಿದೆ ಆದ್ದರಿಂದ ಸ್ಟೇಷನ್‌ಗೆ ಹೋಗು'' ಎಂದರು. ಇನ್ನುಮೇಲೆ ಅನಾರೊಗ್ಯ ವಿರುವುದಿಲ್ಲ. ವಾರವಾರ ಬರುವ ಆವಶ್ಯಕತೆ ಯಿಲ್ಲ. ಎರಡು ದಿನರಜೆ ಕೂಡಿಬಂದಾಗ ಬಾ, ಹಗಲು ಹಾಯಾಗಿ ಭೋಜನಮಾಡು ಬೆಳಿಗ್ಗೆ, ಮಧ್ಯಾಹ್ನವು ಲಘು ಆಹಾರವನ್ನುತೆಗೆದುಕೋ. ಜೀರ್ಣಶಕ್ತಿ ಸರಿಯಾಗಿ ಇರುವುದು. ಲಿವರ್ ಸರಿಹೋಗಿದೆ. ರಾತ್ರಿಯ ಹೊತ್ತು ಮಜ್ಜಿಗೆ ಅಲ್ಲದೆ ಹಾಲು ಹಾಕಿಕೊಂಡು ಊಟಮಾಡು''ಎಂದರು. ತಂಜಾವೂರಿಗೆ ತೆರಳಿದೆ.

ನನ್ನನ್ನು ಕರೆದು ಶ್ರೀಅವರು(ಮಾಸ್ಟರ್ ಅವರು)''ನೀನು, ಈರಾತ್ರಿ ನಾನು ಸದಾ ನಿವಸಿಸುವ ಯೋಗಾಲಯದ ಕೊಠಡಿಯಲ್ಲಿ, ನಾನು ವಿಶ್ರಮಿಸುವ ಬೆಂಚಿನ ಮೇಲೆ ನಿನ್ನಪತ್ನಿಯ ಜೊತೆ ಮಲಗು. ನಾನಾಗ ಮನೆಯಲ್ಲೇ ಮಲಗುತ್ತಿದ್ದೆ'' ಎಂದರು. ನಾನು ಗಡಗಡನೆ ನಾಚಿಕೆಯಿಂದ ಅಂಗೀಕಾರ ಸೂಚಕವಾಗಿ ತಲೆ ಬಗ್ಗಿಸಿದೆ. ಆದರೆ ನನಗೆ ಆ ಮೇಲೆ ತುಂಬಾ ಸಂಕೋಚವಾಯಿತು. ಅದು ಗುರುದೇವರು ಮಲಗುವ ಕೊಠಡಿ, ಅದರಲ್ಲಿಅವರು ವಿಶ್ರಮಿಸುವ ಬೆಂಚು! ಅದರಲ್ಲಿ ನಾನು ಮಲಗುವುದೇ? ಅದರಲ್ಲೂ ಸದ್ವಿತೀಯವಾಗಿ! ಎಂದು ಹೆದರಿದೆ.

ಶ್ರೀಅವರ(ಮಾಸ್ಟರ್ ಅವರ) ಮನೆಯಲ್ಲಿ ವಿಶಾಲವಾದ ಒಳಗಿನ ಭಾವಣಿಯಲ್ಲಿ ಚಂದ್ರ-ನಕ್ಷತ್ರಾದಿಗಳು ನೀಲಾಕಾಶವು ಗೋಚರಿಸುತ್ತಿರುವಾಗ ತಣ್ಣನೆಯ ಗಾಳಿ ಬೀಸುತ್ತಿರುವಾಗ, ಒಂದು ಗೋಲ್ಡ್‌ಮೆಡಲ್ ಮಡಚಿರುವ ಮಂಚದ ಮೇಲೆ ತೆಳುವಾದ ಹಾಸಿಗೆಯ ಮೇಲೆ ಮಲಗಿದ್ದರು. ಹಾಸಿಗೆಯ ಮೇಲು, ಕೆಳಗೂ ಚೆಲ್ಲಿದ ಮಲ್ಲಿಗೆಯ ಹೂವುಗಳಿದ್ದವು. ರೇಶ್ಮೆಯ

ಶ್ರೀಅವರೇ(ಮಾಸ್ಟರ್ ಅವರೇ)ಶಾಸಿಸಿದರು. ಕಾಪಿಗಳನ್ನು ವಶಪಡಿಸಿ ಕೊಂಡು ಕಟ್ಟೆ ಕಟ್ಟಿ ಅಟ್ಟದ ಮೇಲೆ ಬಚ್ಚಿಟ್ಟರು. ಇನ್ನು ಮೇಲೆ ನಾಡಿ ಓದ ಬೇಡಿರೆಂದರು.

''ನಾಡಿಗೆ ಪರಮ ಪ್ರಾಮಾಣವನ್ನು ಕಲ್ಪಿಸಿಕೊಂಡು ನೀವು ಓದಬಾರದು. ನನ್ನ ಹತ್ತಿರ ನೀವು ಬಂದು ಶಿಷ್ಯರಾಗಿರುವುದು ನಾಡಿ ಮೂಲದಿಂದಲ್ಲ. ನಾಡಿ ನೋಡುವುದು, ನೀವು ನನ್ನ ಶಿಷ್ಯರಾದ ಬಳಿಕವೇ. ಯಾವ ಕಾರಣದಿಂದ ನೀವು ನನ್ನ ಶಿಷ್ಯರಾದರೋ, ಆ ಕಾರಣದಿಂದಲೇ ನನ್ನನ್ನು ಅನುಸರಿಸಿ. ನನ್ನ ಮಾತುಗಳು ಸ್ವತಃ ಪ್ರಮಾಣಗಳು. ಆದರೆ ಪರತಃ ಪ್ರಮಾಣಗಳಲ್ಲ. ನನ್ನನ್ನು, ನನ್ನ ಕಾರ್ಯಗಳನ್ನು ನಾಡಿ ಅನುಸರಿಸಿ ವಿಶ್ವಾಸಿಸ ಬೇಡಿ'' ಎಂದರು.

''ನನ್ನ ಯೋಗ ಮಾರ್ಗವನ್ನು ಪರಿಪೂರ್ಣವಾಗಿ ಗುರ್ತಿಸುವುದು ಯಾರಿಗೂ ಸಾಧ್ಯವಾಗದು, ಅದು ನನಗೂ ಸಹ ಆಗಾಗ ತಿಳಿಯಲು ಸಾಧ್ಯವಾಗುವಂತಿರುವುದು. ಶಾಖೋಪಶಾಖೆಗಳಾಗಿ ಬೆಳೆಯುವ ಆಲದ ಮರಕ್ಕೆ, ಎಷ್ಟು ದಿನಕ್ಕೆ, ಯಾವ ದಿಕ್ಕಿಗೆ ಯಾವ ಕೊಂಬೆ ಬೆಳೆಯುವುದೋ, ತಿಳಿಯದ ಹಾಗೆ ಲೋಕತಂತ್ರದಲ್ಲಿ ವಿಕಾಸವಿರುವುದು. ಮಾನವನು ಈಶ್ವರತೆಯನ್ನು ಸಮೀಪಿಸುವಷ್ಟು ಅದನ್ನು ತಿಳಿದುಕೊಳ್ಳ ಬಲ್ಲನು. ವೃಕ್ಷಶಾಸ್ತ್ರದಲ್ಲಿ ಕೆಲವು ವೃಕ್ಷಗಳು ಇಷ್ಟು ದಿನಗಳಿಗೆ ಇಷ್ಟು ಎಲೆಗಳನ್ನೋ, ಕೊಂಬೆಗಳನ್ನೋ ಬೆಳೆಸುವುದೆಂದೂ, ಈ ಸಮಯಗಳಲ್ಲಿ ಪುಷ್ಪಿಸುವುದೆಂದೂ, ಫಲಿಸುವುದೆಂದೂ, ಇಷ್ಟು ಪುಷ್ಪಗಳೆಂದು ಇಷ್ಟು ಫಲಗಳೆಂದು ಸಹ ಗುರ್ತಿಸಲಾಗುತ್ತಿದೆ. ಮಾನವನ ಪ್ರಜ್ಞೆ ಬೆಳೆಯುತ್ತಾ, ಬೆಳೆಯುತ್ತಾ ಈಶ್ವರನಿಗೆ ಹತ್ತಿರ, ಹತ್ತಿರವಾಗಲು ಸರ್ವಪ್ರಾಣಿ ಸೃಷ್ಟಿ ರಹಸ್ಯಗಳನ್ನು ಮಾನವನು ಗುರ್ತಿಸಬಹುದು. ಮಾನವತೆ ಬೆಳೆಯಲು ಆ ಹೃದಯದಿಂದ ಪ್ರಜ್ಞೋದ್ಬೋಧಗಳು ಬೆಳೆಯಬಲ್ಲವು. ಈಗ ಅಭಿವೃದ್ಧಿ ಯಾಗುತ್ತಿರುವ ಶಾಸ್ತ್ರಗಳೆಲ್ಲವೂ ಅಂತಹವೆ.''

''ಮಾನವನ ಹೃದಯವು ಪರಿಪೂರ್ಣ ವಾಗದೇ ಇರುವವರೆಗೂ ಮಾನವನ ನುಡಿ ಸುಪವಿತ್ರವಾಗದೇ ಇರುವವರೆಗೂ, ಮಾನವನ ಕಾರ್ಯಗಳು ನಿರ್ಮಲವಾಗದೇ ಇರುವವರೆಗೂ, ಸೃಷ್ಟಿರಹಸ್ಯವನ್ನು ಮಾನವನು ತಿಳಿದುಕೊಳ್ಳಲಾರನು ಪ್ರಯತ್ನಗಳು ಸಾಗುತ್ತಲೇ ಇದೆ.''

ನೀವು ಈ ನಾಡೀ ಗ್ರಂಥಗಳನ್ನು ಅನುಸರಿಸಿದರೆ ನಿಮ್ಮಲ್ಲಿರುವ ಪ್ರಜ್ಞೋದ್ಬೋದನೆ ಗಳು ಕುಂಠಿತವಾಗುವುದು. ಬಾಹ್ಯಶಾಸ್ತ್ರಾದಿ ಸಾಧನೆಗಳನ್ನು ಬಿಡಬೇಕು. ಪ್ರಜ್ಞೋದ್ಬೋದನೆ ಗಳನ್ನು ಕಡೆಗೆ ಆತ್ಮಾನುಭೂತಿಯಲ್ಲಿ ಸ್ಥಾಪನೆ ಯಾಗುವುದು. ನೀವು ನೋಡಬೇಕಾಗಿರುವುದು ಈ ತಾಳಿ ಎಲೆಯ ನಾಡಿಯಲ್ಲ, ಶರೀರದಲ್ಲಿ ಚೈತನ್ಯದಿಂದ ಆಡುತ್ತಿರುವ ನಾಡಿ, ಈ ತಾಳಿ ಎಲೆಯನ್ನು ಈಗ ಕಟ್ಟಿಟ್ಟು ಇದರಲ್ಲಿ ತೋರಿಸುವ ಶ್ರದ್ಧೆಯನ್ನು ಯೋಗ ಸಾಧನೆಯ ಮೇಲೆ ತೋರಿಸು'' ಎಂದರು.

ಶ್ರೀ ಶಾಸ್ತ್ರಿಯವರ ಘನತೆ ಏನು?

1. ಮಾಸ್ಟರ್ ಸಿ.ವಿ.ವಿ. ಅವರಿಂದ ಇನ್ಸಿಯೇಷನ್ ಹೊಂದಿರುವುದು.
2. ಶ್ರೀಅವರೊಡನೆ(ಮಾಸ್ಟರ್ ಅವರೊಡನೆ) ನೇರವಾಗಿ ಮಾತನಾಡುವುದು.
3. ಸೊಸೈಟಿ ಸೂಪರಿಂಟೆಂಡೆಂಟು ಆದ ಶ್ರೀ ಎಸ್. ಸುಂದರವರ ಅನುಮತಿಯ ಅವಶ್ಯಕತೆ ಇಲ್ಲದೆ, ಸಿ.ವಿ.ವಿ. ಅವರನ್ನು ನೋಡುವುದು.
4. ಸಿ.ವಿ.ವಿ. ಅವರು ಮಲಗುವ ಬೆಂಚಿನ ಮೇಲೆ ಪತ್ನಿ ಸಮೇತವಾಗಿ ಮಲಗು ಎಂದು ಸಿ.ವಿ.ವಿ. ಅವರು ಹೇಳುವುದು.
5. ಮಾಸ್ಟರ್ ಸಿ.ವಿ.ವಿ. ಅವರು ಹೇಳಿದ ಅಮೃತವಾಕ್ಯಗಳನ್ನು ನಮಗೆ ತಲುಪಿಸಿರುವುದು.

ಈ ಅದೃಷ್ಟವನ್ನು ಹೊಂದಿದ ಧನ್ಯಜೀವಿ ಶ್ರೀ ಪ್ರಭಾಕರ ಶಾಸ್ತ್ರಿಯವರು.

ಕುಂಭಕೋಣಂಗೆ ಹೋಗುವ ಮಾರ್ಗ:-

ಬೆಂಗಳೂರು, ಮದ್ರಾಸ್ ನಿಂದ ಬಸ್ಸುಗಳು ಕುಂಭಕೋಣಂಗೆ ಇದೆ.

ಕುಂಭಕೋಣಂಗೆ ಬಂದಕೂಡಲೆ ಮಳಯಪಾಲಂ ಎಂದು ಹೇಳಿದರೆ ಇಳಿಸ ಬಲ್ಲರು. ಅಲ್ಲಿಗೆ ನೂರು ಗಜಗಳ ದೂರದಲ್ಲಿ 'ಕೀಳ್ ಡಬೀರ್ ತೆರು' ಎಂದು ಇದೆ. ಅದರ ಮುಂದೆಯೇ ಮಾಸ್ಟರ್ ಸಿ.ವಿ.ವಿ. ಯೋಗಸ್ಕೂಲ್, ಕಾಲೇಜ್, ಯೂನಿವರ್ಸಿಟಿ ಎಂಬ ಬೋರ್ಡ್ ಇಂಗ್ಲೀಷ್ ನಲ್ಲೂ, ತೆಲುಗಿ ನಲ್ಲೂ, ತಮಿಳಿನಲ್ಲೂ ಇರುವುದು. ಆ ಮನೆಯ ರೂಮಿನಲ್ಲೆ ಮಾಸ್ಟರ್ ಅವರು 22 ವರ್ಷಗಳು ಪ್ರಾರ್ಥನೆ ಮಾಡಿರುವುದು. ರೈಲು 'ಎಗ್ಮೂರು' ನಿಂದ ಹೊರಡುವುದು.

ಕಾರಿನಲ್ಲಿ ಬರುವವರು ಮದ್ರಾಸ್-ಚೆಂಗಲ್ಪಟ್ಟು-ದಿಂಡಿವನಂ-ವಿಳ್ಳಿಪ್ಪುರಕ್ಕೆ ಮುಂಚೆ ಬ್ರಿಡ್ಜ್ ಇರುತ್ತದೆ. ಅದನ್ನು ದಾಟಿದ ಮೇಲೆ ತಂಜಾವೂರು ಎಂಬ ಬೋರ್ಡ್ ಇರುತ್ತದೆ. ಅಲ್ಲಿ ಎಡಗಡೆಯಲ್ಲಿ ತಿರುಗಿ-ನೈವೇಲಿ-ವಡಲೂರು- ಸೇತ್ತಿಯಾತೋಪು ಮಾರ್ಗವಾಗಿ ಬರುವುದು.

ಈ ಬುಕ್‌ಲೆಟ್ ಇನ್ನೂ ಆಂಗ್ಲ, ತಮಿಳು, ತೆಲುಗು ಭಾಷೆಗಳಲ್ಲಿ ಸಹ ಲಭಿಸುವುದು.

ಸಿ.ವಿ.ವಿ. ಎಂಬ ಮೂರಕ್ಷರಗಳ ಘನತೆ ಏನು?

1. ನಂಬಿಕೆಯಿಂದ, ಅತ್ಯಂತ ವಿಶ್ವಾಸದಿಂದ ಭಕ್ತಿಯಿಂದ ಅವರ ಜೀವನವನ್ನು, ಅವರ ಕುಟುಂಬ ಜೀವನವನ್ನು ಯಾರು ಈ ಯೋಗಕ್ಕೆ ಅಂಕಿತಮಾಡುವನೋ ''ಮಾಸ್ಟರ್ ಅವರ'' ಆಜ್ಞೆಯ ಪ್ರಕಾರ ನಡೆದುಕೊಳ್ಳುವನೋ ಅವನನ್ನು, ಅವನ ಕುಟುಂಬವನ್ನು ''ಡೈರೆಕ್ಟ್ ಆರಿಜ್ ಲೈನ್'' ರಕ್ಷಿಸುವುದು.
2. ಹತ್ತು ವರ್ಷಗಳ ಒಳಗೆ ''ಆರಾ'' ಹಂಚುವ ಶಕ್ತಿ ಬರುತ್ತದೆ. ಅವನ ಮೆದುಳಿನಲ್ಲಿ ''ಲೈಫ್ ಆಕ್ಟಿವಿಟಿ ಫ್ಲೋ'' ಕೆಲಸ ಮಾಡುತ್ತದೆ. ಆ ಶಕ್ತಿ ಬೆಳೆಯುತ್ತಾ ಹೋದಂತೆ ಅವನು ಟ್ರೀಟ್‌ಮೆಂಟ್ ಕೊಡುವುದಕ್ಕೆ ಆ ಶಕ್ತಿಯನ್ನು ಉಪಯೋಗಿಸುವನು.
3. ಮಾಸ್ಟರ್ ಅವರು ಯಾವ ಕೆಲಸ ಹೇಳಿದರೂ ಯಾವಾಗಲಾದರೂ, ಎಲ್ಲಿಗಾದರೂ ಹೋಗಿ, ನಾನು ಹೇಳಿವಂತೆ ಮಾಡುವೆನು, ಎಂಬ ಧೃಢ ನಿಶ್ಚಯದಿಂದ ಪ್ರಮಾಣ ಮಾಡಬೇಕು. ಅವನ ಅನುಕೂಲವನ್ನು, ಅಧಿಕಾರವನ್ನು, ಮರ್ಯಾದೆಯನ್ನು, ನಷ್ಟವನ್ನು ಲೆಕ್ಕಮಾಡುವುದಿಲ್ಲವೆಂದು ಪ್ರಮಾಣ ಮಾಡಬೇಕು.
4. ಇಂತಹ ಅಭಿವೃದ್ಧಿ ಸಿ.ವಿ.ವಿ. ಎಂದು ಪ್ರಾರ್ಥನೆ ಮಾಡಿದರೆ ಒಂದುವರ್ಷ ಆರು ತಿಂಗಳಲ್ಲಿ ಎಷ್ಟು ಲಭ್ಯವಾಗುವುದೋ ಗಮನಿಸಬೇಕು.
5. ಸಿ.ವಿ.ವಿ. ಎಂದು ಹೇಳಿಮಾಡುವ ಪ್ರಾರ್ಥನೆ, ಕತ್ತಲೆಯ ಕೊಠಡಿಯಲ್ಲಿ ಮಾಡಬೇಕು. ಶರೀರದಲ್ಲಿ ವಿಪರೀತವಾದ ವರ್ಕಿಂಗ್ ನಡೆಯುತ್ತದೆ. ಎಷ್ಟೋ ವಿಧವಾದ ಪಾಶ್ಚರ್‌ಗಳು (ಭಂಗಿಮಗಳು) ಬರುತ್ತದೆ. ಗಮನಿಸಬೇಕು.
6. ಹಳೆಯ ಮೇಡಿಯಮ್ಸ್‌ಗಳಲ್ಲಿ (ಸಾಧಕರಲ್ಲಿ) 'ಸೈಟ್' ಎಂದರೆ ದಿವ್ಯದೃಷ್ಟಿಯನ್ನು ಹೊಂದಿದವರನ್ನು, ಕೆಲವರನ್ನು ಈ ಸಿ.ವಿ.ವಿ. ಎಂದು ಪ್ರಾರ್ಥನೆ ಮಾಡಿ ಅಭಿವೃದ್ಧಿಯನ್ನು ಹೊಂದುವುದಕ್ಕೆ ಆರಿಸಿ ಕೊಳ್ಳುತ್ತಿದ್ದೇನೆ.

ಆದರೆ ಈ ಪ್ರಾರ್ಥನೆ ಮಾಡುವವರಿಗೆ ಒಂದು ವಿಧವಾದ ಮತ್ತಿನಲ್ಲಿರುವಂತೆ ಪ್ರಾರ್ಥನೆಯ ಸಮಯದಲ್ಲಾಗಲಿ, ಅನಂತರವಾಗಲಿ ಶರೀರವನ್ನು ಹತೋಟಿ ಯಲ್ಲಿಟ್ಟು ಕೊಳ್ಳುವಷ್ಟು ಸಂಭವಿಸುವುದು. 45 ದಿನಗಳಿಗೆ ಒಂದು ಪರ್ಯಾಯವು ಅವರ ಬ್ರೀತಿಂಗ್ ನಲ್ಲಿ ಬದಲಾವಣೆ ಬರುವುದು, ಗಮನಿಸುವುದು.

7. ಸ್ಥೂಲಕಾಯ ವಿರುವವರು ಇದಕ್ಕೆ ಸರಿಹೋಗುವುದಿಲ್ಲ. ಅವರು ಅಭಿವೃದ್ಧಿ ಹೊಂದಿದರೆ ಟ್ರೀಟ್‌ಮೆಂಟ್‌ಗಳು ಕೊಡುವ ಶಕ್ತಿಯನ್ನು ಕೊಡುತ್ತೇನೆ. ಆ ಟ್ರೀಟ್‌ಮೆಂಟ್‌ಗಳು ಫಲಿಸುವಂತಿರುತ್ತದೆ.
8. ಆದರೆ, ಈ ವಿಧವಾಗಿ 'ಸಿ.ವಿ.ವಿ' ಎಂದು ಪ್ರಾರ್ಥನೆ ಮಾಡಿ ಅಭಿವೃದ್ಧಿಯನ್ನು ಹೊಂದುವ ಮೀಡಿಯಂನ್ನು ಆರಿಸಿ ಕೊಳ್ಳುವುದು ತುಂಬಾ ಕಷ್ಟದಿಂದ ಕೂಡಿದ ಕೆಲಸ. ಆರಿಸಿ

ಕೊಂಡನಂತರ ಸೂಚನೆಗಳನ್ನು ಕೊಡುವೆನು.

11.10 ಎ.ಎಮ್.   ಎಮ್.ಟಿ.ಎ. 15.11.1915.

ಆದ್ದರಿಂದ ಕೋರ್‌ಗಳು ಮುಂತಾದುವುಗಳನ್ನು ಬಾವಿಯಲ್ಲಿ ಕಪ್ಪೆಗಳ ಹಾಗಿ ಕೂಗುವ ಅವಶ್ಯಕತೆಯಿಲ್ಲ. ಅಸಮರ್ಥರು, ಅಭಿವೃದ್ಧಿ ಹೊಂದದವರ ಮಾತುಗಳನ್ನು ನಂಬ ಬೇಡಿ. ನೀವು ಅವರ ಮಾತುಗಳನ್ನು ನಂಬಿದರೆ ಮಾಸ್ಟರ್ ಅವರು ಎದುರುನೋಡುವ ಎಟರ್ನಿಟಿ ಯನ್ನು ಸಂಪಾದಿಸಲಾರರು. ನೀವು ನರಕದಲ್ಲಿ ಬೀಳುವಿರಿ. ಜಾಗ್ರತೆ.

ಮೀಡಿಯಮ್ಸ್‌ಗಳಿಗೆ ಆರಿಜನ್ ವಾರ್ನಿಂಗ್.

ಎಮ್.ಟಿ.ಎ. ಕೆಳಗೆ ತಿಳಿಸಿದ ಸೂಚನೆಗಳನ್ನು ಮೀಡಿಯಮ್ಸ್ ಎಲ್ಲರಿಗೂ ಕೊಟ್ಟಿರುವರು. ನೀವೆಲ್ಲ ಒಂದು ನಿರ್ಣಯಕ್ಕೆ ಬಂದು ನಿಮ್ಮ ಶರೀರದಲ್ಲಿ ಜರುಗುವ ವರ್ಕಿಂಗನ್ನು ಗಮನಿಸಿ. ಹಸಿವು ಹುಟ್ಟಿ ಕಮ್ಮಿಯಾಗುವಂತೆ, ಕೆಟ್ಟಕರ್ಮ ಪ್ರತಿಜನ್ಮದಲ್ಲೂ ಕಲೆಯುತ್ತಾ ಕಮ್ಮಿಯಾಗುತ್ತಾ ಇರುತ್ತದೆ. ಪೂರ್ವಜನ್ಮದಲ್ಲಿನ ಕೆಟ್ಟಕರ್ಮಗಳು, ಕೆಟ್ಟ ಆಲೋಚನೆಗಳನ್ನು, ಉಂಟುಮಾಡುತ್ತಿರುತ್ತದೆ. ಅದು ತೊಲಗಿ ಹೋದರೆ ನೀವು ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವಿರುತ್ತದೆ.

ಜರುಗಿಹೋಗಿದ್ದೂ, ಜರುಗುತ್ತಿರುವುದೂ, ಜರುಗುವುದು ಎಲ್ಲಾ ಶಾಸ್ತ್ರರೀತಿಯಾಗಿ(ಸೈಂಟಿಫಿಕ್‌ಆಗಿ) ತಿಳಿಯುತ್ತದೆ ಈ ಕ್ರಿಯೇಷನ್‌ಲ್ಲೇ.

ಬುದ್ಧಿ ಮೂರು ವಿಧಗಳು: ಒಂದು ಬುದ್ಧಿ(ಮೈಂಡ್), ಎರಡನೆಯದು ವಿವೇಕ(ಇಂಟಲೆಕ್ಚುಯಲ್), ಮೂರನೆಯದು ಸೂಕ್ಷ್ಮಶರೀರದ ಬುದ್ಧಿ(ಆಸ್ಟ್ರಲ್) ಇವುಗಳ ಪರ್ಮಿಷನ್ ಅವಶ್ಯಕ. ಮೊದಲನೆ ಯದರಿಂದ 'ನೋ' ಅಲ್ಲ ಎಂದು, ಎರಡನೆ ಯದರಿಂದ 'ಯಸ್' ಹೌದು ಎಂದು, ಮೂರನೆಯದರಿಂದ 'ನಾಟ್' ಇಲ್ಲ ಎಂಬ ವಿಷಯಗಳು ತಿಳಿಯುತ್ತದೆ.

ಮೊದಲು ನೀವೆಲ್ಲಾ ನಾನು ಹೇಳುವುದನ್ನು ಶ್ರದ್ಧೆಯಿಂದ ಕೇಳಿರಿ. ಎಮ್.ಟಿ.ಎ. ಕೊಡುತ್ತಿದ್ದಾರೆಂದು ನೀವು ತಿಳಿದುಕೊಳ್ಳಬೇಡಿ. ನೀವು ಹಾಗೆ ಅಂದುಕೊಂಡರೆ ನಿಮಗೆ ವಿರುದ್ಧ ಭಾವನೆಗಳು ಉಂಟಾಗುವುದು. ನೀವು 'ಒನ್‌ಪಾಯಿಂಟ್' ಕೊಡುತ್ತಿದೆ ಎಂಬ ಧೃಢನಿಶ್ಚಯದಿಂದ ಇರಬೇಕು. ಆದರೆ ನಿಮ್ಮ ಬುದ್ಧಿಗೆ ಅಂತಹ ಧೃಢನಿಶ್ಚಯವಿಲ್ಲ. ಆದ್ದರಿಂದ ಎಲ್ಲರೂ ಧೃಢನಿಶ್ಚಯದಿಂದಿರಿ.

ಈ ಮಾನವ ಶರೀರವು ಧೃಢವಾದುದೇ? ಆಸ್ಟ್ರಲ್ ಶರೀರ ಧೃಢವಾದುದೇ? ಎಂದು ಕೆಳಗಿನ ಭಾಗದಲ್ಲೂ, ಮೇಲಿನ ಭಾಗದಲ್ಲೂ ಪರೀಕ್ಷಿಸುತ್ತಿರುವಾಗ, ಮೇಲಿನ ಭಾಗದಲ್ಲಿ ಫಿಜಿಕಲ್ ಬಾಡಿ ನಶಿಸಿ ಹೋಗಿರುವುದು ಕಾಣಿಸಿದೆ. ಕೂಡಲೆ ಆಸ್ಟ್ರಲ್ ಬಾಡಿ ಏಕೆ ಕೆಳಗೆ ಇಳಿದು ಬಂದಿದೆ ಎಂದು ಆಲೋಚಿಸಿದೆ.

ಕೂಡಲೆ ನನಗೆ ಒಂದು ಉತ್ತರ ಬಂದಿತು. ಪ್ರಪಂಚದಲ್ಲಿ ಧೃಢನಿಶ್ಚಯ ಎಲ್ಲೂ ಇಲ್ಲ ಆದ್ದರಿಂದ ಹೀಗೆ ಜರುಗಿದೆ ಎಂದು. ಮತ್ತೆ ಅಪ್ಪರ್ ಪೋರ್ಷನ್‌ನಲ್ಲಿ ನೋಡ ತೊಡಗಿದೆ. ಹಾಗಿ ನೋಡಿದ್ದರಿಂದ ಎಲ್ಲಾ ವಿಷಯಗಳು ನನಗೆ ತಿಳಿದು ಬಂದಿತು.

ಇನ್ನೂ ಮೇಲೆಮೇಲೆ ಹೋಗಿ ನೋಡಿದೆ. ಆದ್ದರಿಂದ ದಾರಿಯನ್ನು ಏರ್ಪಾಟು ಮಾಡಿ ತಿರುಗಿ ಬಂದೆ. ನಾನು, ನನ್ನ ಮಾಸ್ಟರಿಗೆ ಉತ್ತರ ತಿಳಿಸಬೇಕು. ಆದ್ದರಿಂದ ತಿರುಗಿ ಬಂದೆ. ನನ್ನ ಗುರುಗಳನ್ನು ಎರಡು ಪ್ರಶ್ನೆಗಳನ್ನು ಕೇಳಿದೆ. ಆಶ್ಚರ್ಯಕರವಾಗಿ ಕೂಡಲೆ ಒಂದು ಒಳ್ಳೆಯ ಹುಟ್ಟನ್ನು ನೋಡಿದೆ. ಇದು ತುಂಬ ಆಶ್ಚರ್ಯಕರವಾದ ವಿಷಯ. ಇಂತಹ ಆಶ್ಚರ್ಯಕರವಾದ ವಿಷಯಗಳು

ನಿಮ್ಮ ಕಣ್ಣುಗಳಿಂದ ನೀವು ನೋಡುವುದಕ್ಕೆ ನಿಮಗೆ ಶಕ್ತಿಯನ್ನು ಕೊಡುವೆನು. ಯಾರು ಈ ಸೊಸೈಟಿಯಲ್ಲಿ ಸೇರಲು ಇಷ್ಟಪಡುವವರೋ, ಅವರಿಗೆ ಎಮ್.ಟಿ.ಎ. ಸೂಚನೆಗಳನ್ನು ಕೊಡುವರು. ಮೈಂಡಿಗೆ, ಇಂಟಲೆಕ್ಚುಯಲ್‌ಗೆ, ಬುದ್ಧಿಗೆ ಅಂತದ ಶಕ್ತಿ ಬಂದಿದೆ. ಇನ್ನೂ ಮೇಲ್ಮೇಲೆ ಬೇಕಾದ ಪವರ್ಸ, ಧೃಢನಿಶ್ಚಯದಿಂದ ಪ್ರಾಕ್ಟೀಸ್ ಮಾಡುವುದರಿಂದ ನಾನು ಹೊಂದುತ್ತಿರುವೆನು.

ನಾನು ಸಿ.ವಿ.ವಿ.ಗೆ ನಿಮಗೂ ಸಹಾ ಎಲ್ಲಾ ತಿಳಿಸಬೇಕೆಂದು ಆಜ್ಞೆ ಮಾಡಿರುವೆನು. ನೀವು ಎಲ್ಲವನ್ನೂ ತಿಳಿದುಕೊಳ್ಳಬೇಕಾದ್ದೇ.

ನಿಮ್ಮ ಮಾಸ್ಟರನ್ನು ನೀವು ಸಣ್ಣ ತನದಿಂದ ನೋಡಬಾರದು. ಅವರನ್ನು ಶ್ರೇಷ್ಠವಾಗಿ ಗೌರವಿಸಿದರೇನೇ ನಿಮಗೆ ಎಲ್ಲಾ ವಿಷಯಗಳು ತಿಳಿಯುತ್ತದೆ. ಸತ್ಯವು ತಿಳಿಯುತ್ತದೆ.

ನಾನು ನಿಮ್ಮ ಗುರುವನ್ನು, ನೀವು ಸಣ್ಣತನವಾಗಿ ನೋಡುವುದಕ್ಕೆ ನಿಮಗೆ ಪರ್ಮಿಷನ್ ಕೊಡಲಿಲ್ಲ. ನೀವೆಲ್ಲಾ ನಿಮ್ಮ ಗುರುಗಳ ಸಮಾನವಾಗಿ ಇರುವುದಕ್ಕಾಗಲೀ ನಿಮ್ಮ ಮಾಸ್ಟರ್ ಗಿಂತಲೂ ಮೇಲಂತಸ್ಥಿನಲ್ಲಿರುವುದಕ್ಕಾಗಲಿ ನಿಮಗೆ ಯಾವವಿಧವಾದ ಪರ್ಮಿಷನ್ ನಾನು ಕೊಡಲಿಲ್ಲ.


ನಿಮ್ಮ ಗುರುವನ್ನು ಮೇಲಂತಸ್ಥಿನಲ್ಲಿ ಕೂರಿಸಿ ಪೂಜಿಸಿದರೇನೇ ನಿಮಗೆ ಅಭಿವೃದ್ಧಿ ಉಂಟಾಗುತ್ತದೆ. ಇಲ್ಲಾ ಯೋಗದಲ್ಲಿ ಸೇರುವುದಕ್ಕೆ ಮುಂಚೇ ಇರುವ ಸ್ಥಿತಿಗೆ ಮತ್ತೇ ಪತನವಾಗಿ ಹೋಗುವಿರಿ. ನೀವು ಉದ್ಯೋಗದಲ್ಲಿ ಶ್ರೇಷ್ಠವಾಗಿರಬಹುದು- ಯೋಗದಲ್ಲಲ್ಲ. ಜಾಗ್ರತೆಯಾಗಿ ನಿಮ್ಮ ಗುರುವಿಗೆ ಮೇಲಂತಸ್ಥನ್ನು ಕೊಟ್ಟು ಪೂಜಿಸಿರಿ. ಇಲ್ಲಾ ನಿಮಗೆ ಪತನ ನಿಶ್ಚಯ. (ಮ.ಲೆ. ತಾ.15-9-1911)

ಆದ್ದರಿಂದ ಯಾರೂ ಸಿ.ವಿ.ವಿ. ಅವರನ್ನು ಬಿಟ್ಟು ಮಿಕ್ಕ ಯಾರನ್ನೂ ಮಾಸ್ಟರ್ ಎಂದು ಕರೆಯಬಾರದು. ಅಚ್ಚು ಹಾಕ ಬಾರದು. ಹಾಗೆ ಹೇಳಿದರೂ-ಬರೆದರೂ- ಬರೆದವನೂ, ಅವನ ಕುಟುಂಬ ಯಾವಾಗಲೂ ಬಾಗಿಲು ತೆರೆದಿರುವ ನರಕಲೋಕಕ್ಕೆ ರಾಕೆಟ್ ತರ ತೂರಿ ಹೋಗುವರು. ಮತ್ತೆ ಮಾನವ ಜನ್ಮವನ್ನು ಹೊಂದುವುದಿಲ್ಲ. ಮಾಸ್ಟರ್ ಸಿ.ವಿ.ವಿ. ಅವರು ಎದುರು ನೋಡಿದ ಎಟರ್ನಿಟಿಯನ್ನು ಈ ಶರೀರ ದೊಂದಿಗೆ ಈ ಜನ್ಮದಲ್ಲಿ ಹೊಂದಲಾರರು. ಮೋಸಗಾರರ, ಅನರ್ಹರ ಮಾತುಗಳನ್ನು ನಂಬಿ ಎಲ್ಲರನ್ನೂ ಮಾಸ್ಟರ್ ಎಂದು ಕರೆಯಬೇಡಿ. ಬರೆಯ ಬೇಡಿ. ಜಾಗೃತವಾಗಿರಿ.


Publications

Books


English



Master's Diary




Mahatma's Letters (Vol.I ,Vol.II and Vol.III)



Master C V V Notes Volume (s) - I & II


Master Notes (Vol. I and Vol.II)
(including Planetary Leading Notes)

Telugu




Pragna Prabhakaramu
Sri Veturi Prabhakara Sastry

Pragna Prabhakaramu
by Sri Veturi Prabhakara Sastry garu



Sri Prabhakara Pravachanaalu


Sri Prabhakara Pravachanaalu
by Sri Veturi Prabhakara Sastry garu



Bhruktha Rahitha Tharaka Rajayogamu
(Sadakas Questions & Answers)

Bhrukta Rahita Taraka Rajayogamu
(Sadakas Questions & Answers)

by Sri A.V.Srinivasacharyulu garu (See Saw)



Bhruktha Rahitha Tharaka Rajayogam

Bhrukta Rahita Taraka Rajayogamu

(Broacher – Telugu, Tamil, Kanada, Hindi, English)

by Sri A.V.Srinivasacharyulu garu (See Saw)

For Copies :

M. Lakshmana Murthy (Trustee)
Mobile No. : +91 9440046226; +91 9492695350

Sri Prabhakara Mitra Mandali
Master C.V.V. Yoga Centre Branch
No. 7-21-S7-315, Konka Street
Near Ramulavari East Mada Street
Tirupati - 517507, Chittoor District, A.P. India

Pragnaprabhakaram Telugu 1976 Edition : Vissa Appa Rao (Junior) : Free Download, Borrow, and Streaming : Internet Archive

Pragna Prabhakaram In Modern Telugu : Vissa Appa Rao (Junior) : Free Download, Borrow, and Streaming : Internet Archive

YOGA DARSANAM Pragna Prabhakaram Padyalu By Gurudev Sri Veturi Prabhakara Sastri : Vissa Appa Rao (Junior) : Free Download, Borrow, and Streaming : Internet Archive

Mani Manjari 1986 08 01 Volume No 12 Issue No Xx 188 P Andhra Bharati : Appa Rao Vissa (Junior) : Free Download, Borrow, and Streaming : Internet Archive

eBooks of Gurudev Sri Veturi Prabhakara Sastri archive.pdf
https://archive.org/details/frontpages_201906 [Files in XPS Format] of Hindi Edition of Pragna Prabhakaram. Parts 1 to 5. 3. https://ia801601.us.archive.org/17/items/in.ernet.dli.2015.328927/2015.328927.PragnyaPrabhakaramu.pdf [Original Telugu Edition Dte.1951August] F. You Tube Videos 1. Veturi Prabhakara Sastry

PRAGNA PRABHAKARAM VOLUME 2 : Vissa Appa Rao (Junior) : Free Download, Borrow, and Streaming : Internet Archive

New Yoga Bhruk Rahita Taraka Raja Yoga (English) : Vissa Appa Rao (Junior) : Free Download, Borrow, and Streaming : Internet Archive


Nootana Yogamu (New Yoga) Bhruktha Rahita Taraka Raja Yogamu : Vissa Appa Rao (Junior) : Free Download, Borrow, and Streaming : Internet Archive

Naya Yog (New Yog) Bhrukth Rahith Tarak Rajyog (Hindi) : Vissa Appa Rao (Junior) : Free Download, Borrow, and Streaming : Internet Archive

https://m.facebook.com/story.php?story_fbid=10213415939646462&id=1038887427

Appa Rao Vissa - Sharing with Ravi Muthuprabhakar: Re-Renovated... | Facebook

Special on SVBC TTD Official Channel. https://youtu.be/vvHpjnOaDDY SVBC TTD Gurudev VPS with Master CVV.mp4 14th January 2013 https://youtu.be/TkJOuYsKWz0 Comment: Anandamurthy Veturi 6 years ago “I like watching this video documentary as many times as possible... Particularly during this (2/12 to 2/13) 125th Birth Anniversary Year Celebrations (1888 - 1950) of Gurudev VPS. Thanks to the TTD & SVBC”. 3. MASTER CVV HOUSE @ YOGA SCHOOL AT KUMBAKONAM https://youtu.be/HLLKWS1bzmQ 4. Veturi Prabhakara Sastri garu - YouTube https://www.youtube.com/watch?v=v6E8SgDPemY Feb 06, 2017 · Talk by Dr. Veturi Sankara Sastri, Youngest Brother of Veturi Prabhakara Sastri.



శ్రీ వేటూరి ప్రభాకర శాస్త్రి గారు